ಶ್ರೀ ಕೃಷ್ಣ ... ಸಂಸ್ಕೃತಿ ವ್ಯಾಸರಾಯರಿಂದ ವ್ಯಾಸಪಂಥ-ದಾಸಪಂಥಗಳೆರಡೂ ಶ್ರೀಮಂತವಾದುವು.

ಪುರಂದರದಾಸರು :

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಶೀಲಿಸಿದರೆ ಒಂದೊಂದು ಪ್ರಕಾರಕ್ಕೂ ಒಬ್ಬೊಬ್ಬ ಪ್ರತಿನಿಧಿಗಳು ಕಂಡುಬರುತ್ತಾರೆ. ಚಂಪೂಗೆ ಪಂಪ, ರಗಳೆಗೆ ಹರಿಹರ, ಷಟ್ಪದಿಗೆ ಕುಮಾರವ್ಯಾಸ, ವಚನಕ್ಕೆ ಬಸವಣ್ಣ ಮೊದಲಾದವರು ಹೇಗೆ ಪ್ರಮುಖರೋ ಹಾಗೆ ಕೀರ್ತನಾ ಕ್ಷೇತ್ರಕ್ಕೆ ಪುರಂದರದಾಸರು ಮುಖ್ಯ ಪ್ರತಿನಿಧಿಗಳಾಗಿ ಪರಿಣಮಿಸಿದ್ದಾರೆ. ದಾಸ ಸಾಹಿತ್ಯದ 'ಅಶ್ವಿನಿ' ದೇವತೆಗಳಲ್ಲಿ ಒಬ್ಬರೆಂದು ಪುರಂದರದಾಸರು ಶ್ರೇಷ್ಠರಾಗಿದ್ದಾರೆ. ವ್ಯಾಸರಾಯರ ಶಿಷ್ಯರಾಗಿ ಮಿನುಗಿದ ಎರಡು ನಕ್ಷತ್ರಗಳು ಒಬ್ಬರು ಪುರಂದರದಾಸರು, ಇನ್ನೊಬ್ಬರು ಕನಕದಾಸರಾಗಿದ್ದಾರೆ. ಈ ಇಬ್ಬರ ಸಾಧನೆ, ಸಿದ್ಧಿಯಿಂದ ಐತಿಹಾಸಿಕ ಮಹತ್ವವನ್ನು ಕೀರ್ತನಾ ಸಾಹಿತ್ಯ ಪಡೆದುಕೊಂಡಿದೆ. ದಾಸ ಸಾಹಿತ್ಯದ ಶಿಖರದಂತಿರುವ ಪರಂದರದಾಸರ ವೈಯಕ್ತಿಕ ಜೀವನದ ಬಗ್ಗೆ ಖಚಿತವಾದ ಮಾಹಿತಿ ಕೊಡುವುದು ಕಷ್ಟವಾಗಿದೆ. ವಿದ್ವಾಂಸರಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಇವರು ಹುಟ್ಟಿದ ವರ್ಷದ ಬಗ್ಗೆಯೂ ಭಿನ್ನಾಭಿಪ್ರಾಯಗಳಿದ್ದು ಇವರು ಬಾಳಿದ ಕಾಲದ ದೃಷ್ಟಿಯಿಂದ ೧೫ನೇ ಶತಮಾನದ ಉತ್ತರಾರ್ಧದ ಮೊದಲ ಭಾಗದಲ್ಲಿದ್ದರೆಂದು ಅಂದರೆ ೧೫೬೪ ಎಂದು ಒಟ್ಟಾಭಿಪ್ರಾಯದಲ್ಲಿ ಹೇಳಬಹುದಾಗಿದೆ. ಇವರ ಪೂರ್ವಾಶ್ರಮದ ಹೆಸರು **'ಶ್ರೀನಿವಾಸ ನಾಯಕ'** 'ಪುರಂದರ ಘಡದ' ವರದಪ್ಪನ ಮಗನಾಗಿ ಜನಿಸಿದರು. ತಂದೆಯಂತೆ ಇವರೂ **'ನವಕೋಟಿ ನಾರಾಯಣ'** ರೆನಿಸಿ ಶ್ರೀಮಂತರಾಗಿದ್ದರಂತೆ. ಇವರ ಹೆಂಡತಿ 'ಸರಸ್ವತಿ ಬಾಯಿಯು' ದೈವ ಭಕ್ತಿಯ ಪ್ರಭಾವದಿಂದ ಜ್ಞಾನೋದಯ ಪಡೆದು ಸಕಲ ಸಂಪತ್ತನ್ನು ದಾನಮಾಡಿ ವ್ಯಾಸರಾಯರಿಂದ ದಾಸದೀಕ್ಷೆಯನ್ನು ಪಡೆದು ಹರಿಭಕ್ತರಾದರೆಂದು ತಿಳಿದುಬರುತ್ತದೆ. ಪುರಂದರದಾಸರೇ "ಆದದ್ದೆಲ್ಲಾ ಒಳಿತೇ ಆಯಿತು, ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು". ಎಂದು ತಮ್ಮ ಜ್ಞಾನೋದಯಕ್ಕೆ ಕಾರಣಳಾದ ಹೆಂಡತಿಯನ್ನು ಮುಕ್ತ ಕಂಠದಿಂದ ಕಾವ್ಯಮಯವಾಗಿ ಹಾಡಿದ್ದಾರೆ. **"ಪುರಂದರ ವಿಠಲ"** ಎಂಬ ಅಂಕಿತದಲ್ಲಿ ತಮ್ಮ ಕೀರ್ತನ ಕೈಂಕರ್ಯವನ್ನು ನೆರವೇರಿಸಿದ್ದಾರೆ. ಇವರ ಸಾಧನೆಯನ್ನು ಮೆಚ್ಚಿಕೊಂಡ ಗುರು ವ್ಯಾಸರಾಯರೇ **"ದಾಸರೆಂದರೆ ಪುರಂದರದಾಸರಯ್ಯ"** ಎಂದು ಹೊಗಳಿದ್ದಾರೆ. ಅವರು ಬರೆದ ಕೀರ್ತನೆಗಳನ್ನು 'ಪುರಂದರೋಪನಿಷತ್ತು' ಎಂದು ಗೌರವಿಸಲಾಗಿದೆ. ಇವರೇ ಹೇಳಿಕೊಂಡಿರುವಂತೆ ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಕೀರ್ತನೆಗಳೆಂದು ಹೇಳಿದರೂ, ಈಗ ಸಿಕ್ಕಿರುವ ಕೀರ್ತನೆಗಳ ಸಂಖ್ಯೆ ಒಂದು ಸಾವಿರಕ್ಕೂ ಅಧಿಕವೆಂದು ಹೇಳಬಹುದಾಗಿದೆ.

'ದಾಸರೆಂದರೆ ಪುರಂದರ ದಾಸರಯ್ಯ' ಎಂದು ತಮ್ಮ ಗುರುವಿನಿಂದಲೇ ಹೊಗಳಿಸಿಕೊಂಡ ಪುರಂದದಾಸರು ತಮ್ಮ 'ಸರಳ ಶೈಲಿಯಿಂದ' ಸಂಗೀತ ಮಾಧುರ್ಯದಿಂದ, ವಸ್ತುವಿನ ವೈವಿಧ್ಯತೆಯಿಂದ, ಜನಮನವನ್ನು ಸೂರೆಗೊಂಡ ದಾಸ ಶ್ರೇಷ್ಠರು. ಪುರಂದದಾಸರ ಪ್ರಸನ್ನವಾಣಿ ದಾಸ ಸಾಹಿತ್ಯಕ್ಕೆ ಅಮರತ್ವವನ್ನು ವೈವಿಧ್ಯವನ್ನು, ವೈಶಿಷ್ಟವನ್ನು, ವೈಶಾಲ್ಯವನ್ನು, ದೊರಕಿಸಿಕೊಟ್ಟಿತು. ---- ಪುರಂದರದಾಸರ ರಚನೆಗಳಲ್ಲಿ ಸಂಗೀತದ ಮಾಧುರ್ಯವೂ, ಸಾಹಿತ್ಯದ ಸ್ವಾರಸ್ಯವು, ಧರ್ಮದ ಸಂದೇಶವು, ಸರಿಸಮನಾಗಿ ಬೆರೆತು ಎಲ್ಲರಿಗೂ ಪ್ರಿಯವಾದವು" ಎಂದು ಜಿ. ವರದರಾಜರಾವ್‌ರವರು 'ಹರಿದಾಸ ಹೃದಯ' ಗ್ರಂಥದಲ್ಲಿ ಹೇಳಿರುವುದು ಸಮಂಜಸವಾದುದ್ದಾಗಿದೆ. ಮತ್ತೊಂದೆಡೆ ಅವರ ಕೃತಿಗಳಲ್ಲಿ ಸಾಹಿತ್ಯ, ಸಂಗೀತ, ಸ್ವಧರ್ಮ, ನಿಷ್ಠೆಗಳ ತ್ರಿವೇಣಿ ಸಂಗಮವನ್ನು ಕಾಣಬಹುದಾಗಿರುವುದರಿಂದಲೇ **'ಕರ್ನಾಟಕದ ಸಂಗೀತ ಪಿತಾಮಹ'** ಎಂದು ಎಲ್ಲರೂ ಸ್ಮರಿಸುವುದು ಹೀಗೆ ಕೀರ್ತನಾ ಸಾಹಿತ್ಯದಲ್ಲಿ ಅತ್ಯುನ್ನತ ಮಟ್ಟವನ್ನೇರಿದವರು ಪುರಂದರದಾಸರು.

ಪುರಂದರದಾಸರ ಕೀರ್ತನೆಗಳಲ್ಲಿ ಸಾಹಿತ್ಯಿಕ ಗುಣಗಳು :

ಪುರಂದರದಾಸರ ರಚನೆಗಳು ಆತ್ಮೀಯವೂ, ಸ್ವಾನುಭವ ಪ್ರಮಾಣ್ಯವೂ ಆಹ್ಲಾದಕಾರಿಣಿಯಿಂದಲೂ ಸಾಹಿತ್ಯಕ ಮೌಲ್ಯವನ್ನು ಪಡೆದುಕೊಂಡಿವೆ. ಈ ಸಾಹಿತ್ಯಿಕ ಮೌಲ್ಯವನ್ನು ಮನವರಿಕೆಯಾಗಲು ಭಕ್ತ ಮತ್ತು ಭಗವಂತನ ಸಂಬಂಧದ ಪಂಚವಿಧ ಭಾವನೆಗಳಾದ ಶಾಂತ, ದಾಸ್ಯ, ಸಖ್ಯ, ಮಧುರ ಮತ್ತು ವಾತ್ಸಲ್ಯಗಳು ಬಹಳ ನೆರವಾಗುತ್ತವೆ.

ಪರಂದರದಾಸರಿಗೆ ಕೃಷ್ಣನ ಬಾಲಲೀಲೆಗಳನ್ನು ವಾತ್ಸಲ್ಯ ಭಾವದ ಗೀತೆಗಳನ್ನು ಬರೆದ ಕೀರ್ತನಕಾರರಲ್ಲಿ ಪ್ರಥಮ ಸ್ಥಾನ ಸಲ್ಲುತ್ತದೆ. ಹರಿದಾಸರಿಗೆ ಬಾಲಗೋಪಾಲನೆಂದರೆ ಬಹಳ ಪ್ರಿಯ ಆತನ ಆಟ ಪಾಠ ತುಂಟಾಟಗಳನ್ನು ವರ್ಣಿಸುವುದರಲ್ಲಿ ಪ್ರತಿಯೊಬ್ಬರಿಗೂ ಆಸಕ್ತಿ. ಆದರೆ ಪುರಂದರದಾಸರನ್ನು ಮೀರಿಸುವವರು ಯಾರೂ ಇಲ್ಲ ಎನ್ನಬಹುದು. ಆ ಕಾರಣಿಕ ಶಿಶುವಿನ ಚಲನವಲನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ.

Scanned with CamScanner

ಒಮ್ಮೆ ಆ ಬಾಲಕನನ್ನು ನೇರವಾಗಿ ಚಿತ್ರಿಸಿದರೆ. ಇನ್ನೊಮ್ಮೆ ಗೋಪಿಯರ ಪಾತ್ರದ ಮಾಧ್ಯಮದ ಮೂಲಕ ನಮ್ಮ ಹೃದಯವನ್ನು ಸೂರೆಗೊಳ್ಳುತ್ತಾರೆ.

"ಕೂಸನು ಕಂಡಿರಾ ಜ್ಞಾನಿಗಳೆಲ್ಲ
ಕೂಸನು ಕಂಡಿರಾ ಸಾಸಿರನಾಮದ
ಶತಕೋಟಿ ತೇಜದ ಸೂಸುವ
ಸುಖಮಯ ಜ್ಞಾನದ ಕೂಸು ;

ಎಂದು ಭಗವಂತನ ಶಿಶು ರೂಪವನ್ನು ಆತನ ಅಲೌಕಿಕ ಗುಣಗಳನ್ನು ಏಕಕಾಲದಲ್ಲಿಯೇ ಪ್ರಸ್ತಾಪಿಸುವರು. ಆ ಮುದ್ದು ಗೋಪಾಲನನ್ನು ಎತ್ತಿ ಆಡಿಸುವ ಭಾಗ್ಯ ಯಶೋಧೆಗೆ ಮಾತ್ರ. "ಗೋಪಿಯ ಭಾಗ್ಯವಿದು ಶ್ರೀಪತಿ ತಾ ಶಿಶು ರೂಪದಲ್ಲಿರುವುದು" ಎಂದು ಹೊಗಳಿ ಹಿಗ್ಗಿದರೆ, "ಜಗದೋದ್ಧಾರನ ಆಡಿಸಿದಳೆಶೋದೆ" ಎಂದು ಆತನ ಅತಿಶಯವನ್ನೆಲ್ಲ ಪಂಕ್ತಿ ಪಂಕ್ತಿಯಲ್ಲಿಯೂ ಹೊಗಳಿ ತಣಿಯುವರು ಆ ಬಾಲಕನನ್ನು ಪಡೆದ ಯಶೋಧೆಗೆ ಎಷ್ಟು 'ಆನಂದವೋ ಅಷ್ಟೇ ಆತಂಕವೂ ಕಾಡುತ್ತದೆ. ಆ ಮಗುವಿನ ವರ್ತನೆಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಂಡು ಬಂದರೂ ಸರಿಯೇ, ಒಡನೆಯೇ ತನ್ನವರೊಡನೆ

"ಹ್ಯಾಗೆ ಮಾಡಲಿ ಈ ಮಗುವಿಗೇನಾಯಿತೋ
ಇದರಾಗಮ ಬಲ್ಲವರು ತಿಳಿದು ಹೇಳಿ"
ಎಂದು ಕೋರಿ ಕಳವಳ ಪಡುವಳು'
"ಹೋಗದಿರಲೋ ರಂಗ ಬಾಗಿಲಿಂದಾಚೆಗೆ
ಭಾಗವತರು ಕಂಡರೆ ಕೊಂಡೊಯ್ವರೋ"

ಎಂದು ಬಗೆಬಗೆಯಾಗಿ ಬೇಡಿಕೊಳ್ಳುವಳು. ತುಂಟ ಕೃಷ್ಣ ಅಷ್ಟು ಸುಲಭವಾಗಿ ತಾಯಿಯ ಮಾತಿಗೆ ಕಿವಿಗೊಡುವವನಲ್ಲ. ಗೋಪ, ಗೋಪಿಯರೆಲ್ಲ ಅವನ ಒಡನಾಡಿಗಳು. ಗೋಕುಲವೆಲ್ಲ ಅವನ ಪಾಲೇ. ಎಷ್ಟು ಬುದ್ಧಿಯ ಮಾತನ್ನು ಹೇಳಿದರೂ ಕೇಳದಿರಲು ಗುಮ್ಮನನ್ನು ಕರೆಯುವೆನೆಂದೋ, ಬೂಚಿ ಬಂದಿದೆಯೆಂದೋ ಬೆದರಿಸುವಳು. ಆ ಮಗು ಅಮ್ಮನ ಬಳಿ ಗುಮ್ಮನ ಕರೆಯದಿರಲೆಂದು ಗೋಗರೆಯುವ ಪರಿಯನ್ನು ನೋಡಿ.

"ಗುಮ್ಮನ ಕರೆಯದಿರೇ ಅಮ್ಮ ನೀನು

ಸುಮ್ಮನೆ ಇರುವೆನು ಅಮ್ಮಿಯ ಬೇಡೆನು
ಮಮ್ಮು ಉಣ್ಣುತ್ತೇನೆ ಅಮ್ಮ ಅಳುವುದಿಲ್ಲ
- - - - - - - - - - - - - -
ಮಗನ ಮಾತನು ಕೇಳುತ ಗೋಪಿ ದೇವಿ
ಮುಗುಳು ನಗೆ ನಗುತ
ಜಗದೊಡೆಯ ಶ್ರೀ ಪುರಂದರ ವಿಠಲನ
ಬಿಗಿದಪ್ಪಿಕೊಂಡಳು ಮೋಹದಿಂದಾಗ"

ಈ ಕೀರ್ತನೆಯು ಗೇಯತೆಯಿಂದಲೂ ಶ್ರೇಷ್ಠವಾದುದಾಗಿದೆ. ಲಯ ಮತ್ತು ಭಾವಗಳೆರಡೂ ಮುಗ್ಧ ಶಿಶು ಲೋಕವನ್ನು ನಿರ್ಮಿಸಿ ಬಿಡುತ್ತವೆ. ಮಗನ ತುಂಟಾಟದಿಂದ ಬೇಸರಗೊಂಡ ತಾಯಿಯನ್ನು ರಮಿಸುವ ಇಲ್ಲಿನ ಈ ಬಾಲ ಭಾಷೆ ಸಹಜವಾದದ್ದು. ಮತ್ತು ಮುದ್ದಾದುದು. ಬಾಲ ಭಾಷೆಯ ವಿಶಿಷ್ಟತೆಯಿಂದ ಮೆರುಗುಗೊಂಡಿದೆ ; ತುಂಟ ಮಕ್ಕಳನ್ನು ಹೆದರಿಸಲು ತಾಯಂದಿರು ಬಳಸುವ ಗುಮ್ಮನ ಕಲ್ಪನೆಯಿಂದಲೂ ಕೂಡಿ ಅತ್ಯಂತ ಸಹಜವಾದುದು.

ತಾಯಿಯ ಬಳಿಗೆ ಬಂದ ಮಗು ಗುಮ್ಮನ ಕರೆಯದಿರೆ ಎಂದು ಬಳಸುವ ಮಾತಿನಲ್ಲಿರುವ ಆತ್ಮೀಯತೆ, ಅಕ್ಕರೆಗಳು, ಗುಮ್ಮನನ್ನು ಕರೆದರೆ ಹೇಗೋ ಎಂಬ ದಿಗಿಲುಗಳನ್ನು ಅಭಿನಯಿಸುತ್ತವೆ. ಇಲ್ಲಿನ ಪಲ್ಲವಿ, ಅನುಪಲ್ಲವಿಯೂ ಪುನರಾವರ್ತನೆಗೊಂಡು ಅರ್ಥವನ್ನು ತೀಡಿ ತೀಡಿ ಹೊಳಪು ಗೊಳಿಸುತ್ತದೆ.

ತಾಯಿಯ ಬಳಿ ಮಗು 'ಗುಮ್ಮನ ಕರೆಯದಿರೆ' ಎಂದು ಗೋಗರೆಯುವ ಮುದ್ದು ಚಿತ್ರವಿದೆ. ಅನುಪಲ್ಲವಿಯಲ್ಲಿ ಬರುವ 'ಅಮ್ಮಿ' 'ಮಮ್ಮು' ಪದಗಳಿದ್ದು ಸಂಪೂರ್ಣವಾಗಿ ಶಿಶುಲೋಕಕ್ಕೆ ಸಂಬಂಧಿಸಿದ ಪದಗಳಾಗಿವೆ. ಸುಂದರನೂ, ತುಂಟನೂ, ಎಳೆಯನೂ, ಆದ ಮುದ್ದು ಕೃಷ್ಣ ಮುದ್ದು ಮುದ್ದಾಗಿ ಈ ಮಾತುಗಳನ್ನು ಹೇಳುತ್ತಾ' ಅಮ್ಮ ಅಳುವುದಿಲ್ಲ' ಎಂದು ಭರವಸೆಯನ್ನು ಕೊಡಹೋಗುವುದು ಶಿಶುಲೋಕದ ಯಶಸ್ವೀ ತಂತ್ರವಾಗಿದೆ. ನಿನಗೆ ಕೋಪ ಬರುವುದಾದರೆ ಕಣ್ಣು ಮುಚ್ಚಾಲೆಯ ಆಟಕ್ಕಾಗಿ ಹೆಣ್ಣು ಮಕ್ಕಳ ಕಣ್ಣು ಮುಚ್ಚುವುದಿಲ್ಲ ಎನ್ನುವ ಮಾತಿನ ವ್ಯಂಗ್ಯ ಅರ್ಥಪೂರ್ಣವಾದದ್ದು. ಹೆಣ್ಣು ಮಕ್ಕಳೊಡನಾಡುವ ಚೆಲ್ಲಾಟಕ್ಕೆ ಕಣ್ಣು ಮುಚ್ಚಾಲೆಯ ಸೋಗು ಸೇರಿಸುವುದು ಇಲ್ಲಿಯ ವೈಶಿಷ್ಟ್ಯ. ಮುಂದುವರಿದು ಮಿಕ್ಕ ಹುಡುಗರನ್ನು ಬಡಿಯುವುದಿಲ್ಲ.

Scanned with CamScanner

ಹಾಗೂ ಅಣ್ಣನನ್ನು ಬಯ್ಯುವುದಿಲ್ಲ ಎಂದು ಬರವಸೆಯನ್ನು ಕೊಡುತ್ತಾ ತನ್ನ ತುಂಟಾಟದ ನೆನಪನ್ನು ಉಕ್ಕಿಸುತ್ತದೆ. ಮುಂದಿನ ಸಾಲುಗಳು ನಂದಗೋಕುಲದಲ್ಲಿನ ಚಿತ್ರವನ್ನೂ ಅಲ್ಲಿ ಬಾವಿಗೆಹಾರಿ, ಕೃಷ್ಣ ನಡೆಸುತ್ತಿದ್ದ ಪವಾಡವನ್ನು ಧ್ವನಿಸುತ್ತವೆ. ತಾನು ಇನ್ನು ಮುಂದೆ ಅಂಥ ಅಪಾಯದ ಕಾರ್ಯಕ್ಕೆ ಕೈಹಾಕುವುದಿಲ್ಲವೆಂಬ ನಂಬಿಕೆಯನ್ನು ತಾಯಿಯಲ್ಲಿ ಮೂಡಿಸುವ ಮಗುವಿನ ಯತ್ನವನ್ನು ಬಿಂಬಿಸುತ್ತವೆ. ಮುಂದಿನ ಸಾಲುಗಳಲ್ಲಿ ಹಸುಗಳಿಗೆ ಕರುಗಳನ್ನು ಬಿಡುವುದಿಲ್ಲ ಎಂದು 'ದೇವರಂತೆ ಬಂದು ಬಾವಿಗೆ ಕೂಡಿವೆ' ಎನ್ನುವ ಮಾತಿನಲ್ಲಿ ಶಿಖರ ಸ್ಥಾನವನ್ನು ಮುಟ್ಟಿ ಬಿಡುತ್ತದೆ. ಇಷ್ಟೊಂದು ಅದ್ಭುತವಾಗಿರುವ ಈ ಕೀರ್ತನೆಗೆ ಪ್ರಾಪ್ತವಾಗುವ ನಾಟಕೀಯತೆಯ ತಿರುವನ್ನು ಇಲ್ಲಿ ನೋಡಬಹುದು. ಇಂಥ ಶಿಶುಲೀಲೆಯಲ್ಲಿ ಮಗ್ನನಾದ ಭಗವಂತನನ್ನು ಕಂಡ ಯಾವ ತಾಯಿ ತಾನೆ ಸಮ್ಮನಿದ್ದಾಳು ? ಮೋಹದಿಂದಾಗ, ಆಕೆ ಜಗದೊಡೆಯನನ್ನೇ ಮುಗುಳು ನಗುತ್ತ ಬಿಗಿದಪ್ಪಿ ಕೊಂಡಳು ಎಂದು ಈ ಕೀರ್ತನೆ ಮುಗಿಯುತ್ತದೆ. ಈ ಕೀರ್ತನೆಯಲ್ಲಿ ಸಾಂಕೇತಿಕತೆ, ಪ್ರತಿಮಾನಿಷ್ಠತೆ ಚಿತ್ರದ ಸಾಮರ್ಥ್ಯದಿಂದ ಅತ್ಯಂತ ಯಶಸ್ವಿಯಾಗುತ್ತದೆ. ಕೃಷ್ಣ ಇದಕ್ಕೆ ಒಂದೆರೆಡು ಬಾರಿ ಹೆದರಿದರೂ ಆ ಬಳಿಕ ಅದಕ್ಕೂ ಸಗ್ಗುವವನಲ್ಲ. ಈ ಮಧ್ಯೆ ಕೆಲವು ಗೋಪಿಯರು ಬಂದು ದೂರಿನ ಮಳೆಯನ್ನೇ ಕರೆಯುತ್ತಾರೆ. ಆದರೂ ತಾಯಿಯಲ್ಲವೇ ! ಮಗನ ಪಕ್ಷವನ್ನೇ ವಹಿಸಿಕೊಂಡು ಮಾತನಾಡುತ್ತಾಳೆ. ಮನೆಗೆ ಬಂದ ಗೋವಿಂದನನ್ನು ಕಂಡು ಹೊರಗೆ ಹೋಗಿ ಆಡದಿರು ಹರಿಯೇ ಎಂದು ನೊಂದುಕೊಳ್ಳುವ ಮಾತೃ ಸ್ವಭಾವವನ್ನು ಪುರಂದರದಾಸರು ಮರೆತಿಲ್ಲ. ಮಗನ ತುಂಟಾಟವನ್ನು ತಡೆಯಲಾರದ ಯಶೋಧೆ 'ಹಿಡಿದುಕೊಂಡು ಹೋಗಲೋ ಜೋಗಿ' ಎಂದು ಹೆದರಿಸುವುದು ತಪ್ಪಿಸಿಕೊಂಡ ಮಗನನ್ನು ಹುಡುಕುತ್ತ 'ಅಮ್ಮ ನಿಮ್ಮ ಮನೆಗಳಲ್ಲಿ ನಮ್ಮ ರಂಗನಕಂಡಿ ರೇನೆ' ಎಂದು ಮನೆಮನೆಗಳಲ್ಲಿ ಮುನಿಸಿ ಕೊಂಡಿರುವ ತನ್ನ ಕಂದನಿಗಾಗಿ ಹಾತೊರೆಯುವುದು, ಇಕೋ ನವಗೀತ ಚೋರ ಸಿಕ್ಕಿದ ನಮ್ಮ ಎಂದು ವಿಸ್ಮಯಗೊಳ್ಳುವುದು. ಹೀಗೆ ಶ್ರೀ ಕೃಷ್ಣನ ಚಹರೆಗಳನ್ನೆಲ್ಲಾ ಹೇಳಿ ಗೋಕುಲದಲ್ಲೆಲ್ಲ ಹುಡುಕಾಡುತ್ತಾರೆ. ಇಂಥ ಕೀರ್ತನೆಗಳಲ್ಲಿ ಮಗ-ತಾಯಿಯ ವಾತ್ಸಲ್ಯ ಭಾವವು ಸ್ವಭಾವೋಕ್ತಿಯಿಂದ ಕೂಡಿದೆ. "ಕೀರ್ತನಾ ಸಾಹಿತ್ಯದ ಬಂಗಾರದ ಬೆಳಸನ್ನೇ ನಾವು ಈ ಕ್ಷೇತ್ರದಲ್ಲಿ ಕಾಣಬಹುದಾಗಿದೆ ಎಂದು ಜಿ. ಎಸ್. ಸಿದ್ಧಲಿಂಗಯ್ಯನವರ ಮಾತು ಗಮನಾರ್ಹವಾದುದಾಗಿದೆ.

ದಾಸರ ಕೀರ್ತನೆಗಳಲ್ಲಿ ಸಮರ್ಪಣ ಭಾವವೂ ಪ್ರಮುಖ ಸ್ಥಾನ ಪಡೆದುಕೊಂಡಿದೆ. 'ದಾಸನ ಮಾಡಿಕೋ' 'ಕಂಡು ಕಂಡು ನೀಯನ್ನ ಕೈ ಬಿಡುವರೆ' ಎಂದು ಹರಿಯನ್ನು ಆರ್ದತೆಯಿಂದ ಬೇಡುವ ದಾಸರು ಇನ್ನೊಮ್ಮೆ, **'ನೀನ್ಯಾಕೋ ನಿನ್ನ ಹಂಗ್ಯಾಕೋ' ನಿನ್ನ ನಾಮದ ಬಲವೊಂದಿದಿದ್ದರೆ ಸಾಕೋ' 'ಎನಗೂ ಆಣೆ ರಂಗ ನಿನಗೂ ಆಣೆ'** ಎಂದೇ ಸವಾಲೆಸೆಯುತ್ತಾರೆ. ಇಂಥಹ ಕೀರ್ತನೆಗಳಲ್ಲಿ ಹರಿಯ ಸಂಪ್ರದಾಯಿಕ ರೂಪವನ್ನೇ ವರ್ಣಿಸಲಾಗಿದ್ದರೂ ಅಲ್ಲಿನ ರೂಪಕ, ಉಪಮೆಗಳು, ಶಬ್ದ ಚಿತ್ರಗಳಿಂದ ಅಪೂರ್ವವಾಗಿವೆ. ಸಂಸಾರದ ನಿಸ್ಸಾರತೆಯನ್ನು ಹೇಳಿದರೂ **'ಮಾನವ ಜನ್ಮ ದೊಡ್ಡದು'** ಅದನ್ನು **'ಹಾನಿ ಮಾಡಬೇಡಿ ಹುಚ್ಚಪ್ಪಗಳಿರ'** ಎಂದು ಎಚ್ಚರಿಸಿ. **'ಈಸಬೇಕು ಇದ್ದು ಜೈಸಬೇಕು'** ಎಂದು ಬೋಧಿಸುತ್ತಾರೆ. **'ಮಡಿ ಮಡಿಯೆಂದಡಿಗಡಿಗ್ಹಾರುವಿ'** **'ಉದರ ವೈರಾಗ್ಯವಿದು'** ಕೀರ್ತನೆಗಳು ತನ್ನ ಕಾಲದ ಜನರ ಬೂಟಾಟಿಕೆಯನ್ನು ಕುರಿತಂಥವು. ಎಲ್ಲರೂ ಮಾಡುವುದು ಹೊಟ್ಟೆಗಾಗಿ **'ಲೋಳ್ ಲೊಟ್ಟೆ ಎಲ್ಲಾ ಲೊಳಲೊಟ್ಟೆ'** ಕೀರ್ತನೆಗಳಲ್ಲಿನ ಅಭಿವ್ಯಕ್ತಿ ಮತ್ತು ಭಾಷೆಯ ಸಹಜತೆಯಿಂದ ಸಾಹಿತ್ಯಕ ಮೌಲ್ಯವನ್ನು ಹೆಚ್ಚಿಸುತ್ತದೆ.

ಪುರಂದರದಾಸರ ಕವಿ ಸಹಜವಾದ ಹೃದಯವನ್ನು ಅವರ ಕೃತಿಗಳಲ್ಲಿ ಕಂಡುಬರುವ ಅನಾಯಾಸವಾದ ಅಲಂಕಾರಗಳಿಂದಲೂ ಕಾಣಬಹುದಾಗಿದೆ. 'ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೂ' ಎಂದು ದೇವರ ನಾಮವನ್ನು ಹೇಳುವಗಾ, **'ರೊಕ್ಕ ಎರಡಕ್ಕೂ ದುಃಖ ಕಾಣಕ್ಕ', 'ಗಿಳಿಯ ಪಂಜರದೊಳಗಿಲ್ಲ', ಡೊಂಕು ಬಾಲದ ನಾಯಕರೆ', 'ಜಾಲಿಯ ಮರದಂತೆ ಧರೆಯೊಳು ದುರ್ಜನರು'**, ಮುಂತಾದ ಕೀರ್ತನೆಗಳ ಸಾಂಕೇತಿಕತೆ, ಧ್ವನಿ, ಉಪಮೆ, ರೂಪಕಗಳ ಬಳಕೆಯ ಸಾಮರ್ಥ್ಯಗಳು ಸಾಹಿತ್ಯಿಕ ಮಗ್ಗುಲುಗಳನ್ನೆ ನಮ್ಮ ಕಣ್ಣು ಮುಂದೆ ತೆರೆದಿಡುತ್ತವೆ. ಅವರು ಬಳಸಿರುವ ಕೆಲವು ಜಾಣ್ನುಡಿಗಳತ್ತ ನೋಡಿದರೆ ಅವರ ಲೋಕಾನುಭವ ಎಷ್ಟು ವಿಶಾಲವಾದುದು ಎನ್ನಿಸುತ್ತದೆ. **'ನೆಂಟರಿಗೆ ಸಾಲ ಕೊಡುವಾ ಮೂರ್ಖ' 'ಮಡದಿ ಹುಟ್ಟಿದ ಮನೆಯೊಳಿರುವವನು ಮೂರ್ಖ' 'ದುಗ್ಗಾಣಿ ಎಂಬುದು ದುರ್ಜನಸಂಗ' 'ದುಗ್ಗಾಣಿ ಬಲು ಕೆಟ್ಟದಣ್ಣ' 'ರೊಕ್ಕ ಎರಡಕ್ಕೂ ದುಃಖ ಕಾಣಕ್ಕ' 'ಕೆಟ್ಟು ನೆಂಟರ ಸೇರುವುದು ಕಠಿಣ'** ಎಂಬ ಮಾಣಿಕ್ಯ ರಾಶಿಯನ್ನು ಕಂಡರೆ ಅವರಿಗಿದ್ದ ನಿತ್ಯ ಜೀವನದ ನಿಕಟ ಪರಿಚಯ ಪ್ರಕಟವಾಗುತ್ತದೆ.

ಹೀಗೆ ಉಪಮಾನ, ರೂಪಕಾಲಂಕಾರಗಳನ್ನು, ಜಾಣ್ನುಡಿಗಳನ್ನು, ಪೌರಾಣಿಕ, ಉಪಮಾನ, ಸ್ವಭಾವೋಕ್ತಿ, ಧ್ವನಿ, ಶಬ್ದ ಚಿತ್ರಣಗಳನ್ನು ಬಹಳ ಪರಿಣಾಮಕಾರಿಯಾಗಿ ಬಳಸಬಲ್ಲರು. ಕಣ್ಣೆದುರು ಕಂಡು ಬಂದ ಯಾವ ಸಾಮಾನ್ಯ ಚಿತ್ರವಾಗಲಿ, ಸಂಗತಿಯಾಗಲಿ, ತಮ್ಮ ಉದ್ದೇಶಕ್ಕೆ ತಕ್ಕಂತೆ ಸಾದೃಶ್ಯವಾಗಿ ಪ್ರಯೋಗಿಸಬಲ್ಲ ಅವರ ಪ್ರತಿಭೆ ಪ್ರಶಂಸನೀಯವಾದದ್ದು. ಅವರು ಆಡಿದ ಮಾತು, ಹಾಡಿದ ಹಾಡುಗಳು ಸಹಜವಾಗಿ ಭಾವಪೂರ್ಣವಾಗಿದ್ದು ಭಾವಗೀತಾತ್ಮಕವಾಗಿ ಅತ್ಯುತ್ತಮ ಸಾಹಿತ್ಯವಾಗಬಲ್ಲದು ಎನ್ನುವುದಕ್ಕೆ ಅವರ ಕೀರ್ತನೆಗಳು ನಿತ್ಯ ಸಾಕ್ಷಿಗಳಾಗಿವೆ.

ಪುರಂದರದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಿಮರ್ಶೆ :

ಪುರಂದರದಾಸರ ಕೀರ್ತನೆಗಳ ವ್ಯಾಪ್ತಿ ಬಾಲಲೀಲೆ ವಾತ್ಸಲ್ಯಕ್ಕೆ ಸೀಮಿತವಾಗುವುದಿಲ್ಲ. ತಮ್ಮ ಸುತ್ತ ಮುತ್ತಲಿನ ಸಮಾಜ ಜೀವನದ ಕಡೆಗೂ ಮಾನವನ ಸ್ವಭಾವದ ಕಡೆಗೂ ಅವರ ಲೋಕಾನುಭವದ ದೃಷ್ಟಿ ಹರಡಿದೆ. ವಚನಕಾರರಂತೆ

Scanned with CamScanner

ಅವರು ಯಾವ ಸಾಮಾಜಿಕ ಕ್ರಾಂತಿಯನ್ನು ತರಲಿಲ್ಲವಾದರೂ ಮಾನವರ ನಡೆ - ನುಡಿಗಳ ಓರೆಕೋರೆಗಳನ್ನು ಕುರಿತು ಜೀವನದ ನಿರ್ವಹಣೆಗೆ ಎಷ್ಟು ಅಮೂಲ್ಯವಾದ ಸಲಹೆಗಳನ್ನು ನೀಡಿದರೆಂಬುದು ವಿದಿತವಾಗುತ್ತದೆ. ಪುರಂದರದಾಸರು ಬೂಟಾಟಿಕೆಯ ಡಂಭಾಚಾರವನ್ನು ಬಹಳ ಕಟುವಾಗಿ ಖಂಡಿಸಿದ್ದಾರೆ.

"ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ತೀರ ಭಕುತಿಯಿಲ್ಲ"

ಇಲ್ಲಿನ ಶಬ್ದ ಸಂಯೋಜನೆಯೇ ಪ್ರಕಾಶ ಮಾನವಾಗಿದೆ. ಕೀರ್ತನೆಯು ಮುಂದುವರೆದು ಯಾಂತ್ರಿಕವಾದ ಪೂಜಾವಿಧಾನವನ್ನು ಇಲ್ಲಿ ಮುಚ್ಚು ಮರೆಯಿಲ್ಲದೆ ಖಂಡಿಸಿದೆ. ಇಲ್ಲಿನ ಸ್ನಾನದ ಸೋಗು ದೇವರ ಪ್ರತಿಮೆಗಳ ಪ್ರದರ್ಶವನ್ನು ಹರಿತವಾದ ಮಾತುಗಳಲ್ಲಿ ತೆಗಳಿದ್ದಾರೆ. ಇನ್ನು 'ಮಡಿ' ಹೆಸರಿನಲ್ಲಿ ನಡೆಯುವ ಆಡಂಬರವನ್ನು ಕಟುವಾಗಿ ಟೀಕಿಸಿದ್ದಾರೆ.

"ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದನೆ ಕಂಡು"

ಎಂದು ಚಿಕಿತ್ಸಕ ದೃಷ್ಟಿಯಿಂದ ನೋಡುವುದಲ್ಲದೆ ; ಜೀವನ ಎಂಬ ತೆರೆ ಮರೆಯಲ್ಲಿ ಎಂಥೆಂಥ ಅನಾಚಾರಗಳು ನಡೆಯುತ್ತಿವೆ ಎನ್ನುವುದನ್ನು ಬಿಚ್ಚಿ ಹೇಳುವರು ಅವರು ಸದಾಚಾರದತ್ತ ನಮ್ಮ ಮನಸ್ಸನ್ನು ಸೆಳೆಯುವುದರಲ್ಲಿ ದುರಾಚಾರದ ಸ್ವರೂಪವನ್ನು ವಿವರಿಸುವುದರ ಮೂಲಕ ಪ್ರತ್ಯಕ್ಷ ಬೋಧನೆಗಿಂತ ಪರೋಕ್ಷ ಬೋಧನೆ ಹೆಚ್ಚು ಪರಿಣಾಮಕಾರಿಯೆಂದು ಅವರು ತಿಳಿಸುತ್ತಾರೆ. ಇಲ್ಲಿಯ ಪಲ್ಲವಿ, ಅನುಪಲ್ಲವಿಗಳು ಲೋಕದ ನಡತೆಯನ್ನು ಕಂಡು ವಿಸ್ಮಯಗೊಳ್ಳುವ ಅಮೋಘವಾದ ವಾತಾವರಣವನ್ನು ನಿರ್ಮಿಸಿ ಬಿಡುತ್ತವೆ. ಇನ್ನು ಮುಂದುವರೆದ ಕೃತಿಯು ಗಂಡ ಪರಸತಿಗೆ ಹೆಂಡತಿ ಪರಪುರುಷನಿಗೆ ಒಲಿದಿರುವುದನ್ನು ಹೇಳುತ್ತಾ ಅರ್ಥ ಮತ್ತು ಭಾವ ಸಮೃದ್ಧಿಯ ಸೊರಗುವುದನ್ನು ಕಾಣುತ್ತೇವೆ. ಆದರೂ ಇಲ್ಲಿ ಕಂಡುಬರುವ ಕಟಕಿ, ವಿಡಂಬನೆ, ಕುಹಕಗಳನ್ನು ಮೆಚ್ಚಿಕೊಳ್ಳುವಂತದ್ದಾಗಿದೆ. ಸಮಾಜದ ಏಣಿ ಶ್ರೇಣಿಯನ್ನು ಕುರಿತು ಹೇಳುವಾಗ ಹೊಲೆತನವನ್ನು-

"ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಹರಿಯ ಭಕ್ತರು ಪೇಳಿ ಮುತ್ತಿದನು"

ಎಂದು, ನಡೆನುಡಿಯಿಂದ ಹೊಲೆತನ ಬರುವುದೇ ವಿನಾ ಹುಟ್ಟಿನಿಂದಲ್ಲ ಎಂದು ಪ್ರತಿಪಾದಿಸಿದ್ದಾರೆ. ಇಲ್ಲಿ ಅವರು ಕನಕದಾಸರಂತೆ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿಲ್ಲ ಪ್ರಶ್ನಿಸಿಲ್ಲ ; ಆದರೆ ಯಾರು ಹೊಲೆಯ ಎಂಬ ಕಡೆ ಅವರ ಗಮನವಿದೆಯೇ ಹೊರತು ಹೊಲೆಯನನ್ನೇ ಪ್ರಶ್ನಿಸಿಲ್ಲ. ಅಂದರೆ ಸಮಾಜದ ಹೊಲಸನ್ನು ತೊಡೆಯಬೇಕೆಂಬ ನೈತಿಕ ದೃಷ್ಟಿ ಮಾತ್ರ ಅವರದ್ದಾಗಿದೆ. ಪುರಂದರದಾಸರು ಹಣದ ಮಹಿಮೆಯನ್ನು ವ್ಯಾಖ್ಯಾನಿಸುತ್ತಾರೆ. ಇಂದು ಸಹ ಹಣ ಜೀವನದ ಆಜೂ ಬಾಜೂನೊಡನೆ ಜೀವನದ ನೈತಿಕತೆಯನ್ನೇ ಗಾಳಿಗೆ ತೂರುವ ಗುಣವನ್ನು ಪಡೆದಿರುವುದನ್ನು ನಾವು ಅರಿತಿದ್ದೇವೆ. ಆದ್ದರಿಂದಲೇ ವರಕವಿ ಬೇಂದ್ರೆಯವರು **"ಕುರುಡು ಕಾಂಚಣ ಕುಣಿಯುತ್ತಲಿತ್ತು ಕಾಲಿಗೆ ಬಿದ್ದವರ ತುಳಿಯುತಲಿತ್ತು"** ಎಂದು ಅದರ ಮಹಿಮೆಯಿಂದ ಕುರುಡನಾಗುವುದನ್ನು ಎಲ್ಲಾ ಅಸಹಾಯಕರನ್ನು ಧ್ವಂಸ ಮಾಡುವುದನ್ನು ಹೇಳಿದಂತೆಯೇ ಇವರು ಸಹ ಹೇಳಿದ್ದಾರೆ.

"ರೊಕ್ಕ ಎರಡಕ್ಕೂ ದುಃಖ ಕಾಣಕ್ಕ"
"ದುಗ್ಗಾಣಿ ಎಂಬುದು ದುರ್ಜನರ ಸಂಗ"
"ದುಗ್ಗಾಣಿ ಬಲು ಕೆಟ್ಟದಣ್ಣ"

ಎಂಬ ಕೀರ್ತನೆಗಳಲ್ಲಿ ಅದರ ಬರಾಟೆಯ ಶೈಲಿಯ ವಿಕೃತ ಮುಖವನ್ನು ತಿಳಿಸಿದ್ದಾರೆ ಚಿತ್ರಿಸಿದ್ದಾರೆ. ಈ ಕೀರ್ತನೆಗಳ ಶಬ್ದ ವೈಚಿತ್ರ್ಯ, ಕಲ್ಪಕತೆ, ಲೋಕಾನುಭವ, ಭಾಷೆಯಿಂದಲೂ ಉತ್ತಮವಾಗಿವೆ.

ಪುರಂದರ ದಾಸರು ಇಡೀ ಮಾನವ ಸಮುದಾಯಕ್ಕೆ ಅನ್ವಯಿಸುವಂತೆ ರಚಿಸಿದ ಕೀರ್ತನೆಗಳನ್ನು ನೋಡಿದರೆ ಅವರಿಗೆ ಮಾನವ ಜನ್ಮದಲ್ಲಿರುವ ಶ್ರದ್ಧೆಯೂ ಅದರ ಸಾರ್ಥಕದ ಅರಿವು ಸ್ಪಷ್ಟವಾಗುತ್ತದೆ.

'ಮನುಜ ಶರೀರವಿದೇನು ಸುಖ'
ಎಂದು ನಿಸ್ಸಾರತೆಯನ್ನು ಹೇಳಿದರೂ,
"ಮಾನವ ಜನ್ಮ ದೊಡ್ಡದು ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ"

ಎಂಬ ಪಲ್ಲವಿಯಲ್ಲಿ ಪ್ರಕಟವಾಗುವ ದಾಸರ ಆತ್ಮೀಯತೆ ಮನಸೆಳೆಯುತ್ತದೆ. ಹೀಗೆಯೇ ಮುಂದುವರೆದ ಕೀರ್ತನೆಯ ಸಾಲುಗಳಲ್ಲಿ ವೈರಾಗ್ಯದ ಕಡೆಗೆ ಮುಖ ಮಾಡುವುದು, ಕಾಣುವುದು, ಅದರ ಅರ್ಥ ದೃಷ್ಟಿಯಿಂದಲೂ ಸಂಕುಚಿತಗೊಳ್ಳುತ್ತದೆ. ಆದರೂ ಅದು ಪಾರಮಾರ್ಥಿಕವನ್ನು ಧ್ವನಿಸುತ್ತದೆ. ಪುರಂದರದಾಸ ಲೋಕಾನುಭವ ಅಪಾರವಾದದ್ದು. **"ಈಸಬೇಕು ಇದ್ದು ಜೈಸಬೇಕು"** ಎಂದು ಲೋಕಕ್ಕೆ ಬೋಧಿಸುವರು.

Scanned with CamScanner

"ಆಚಾರವಿಲ್ಲದ ನಾಲಿಗೆ" ಎಂದು ನಾಲಿಗೆಯ ದುರ್ಗುಣವನ್ನು ಹಾಡುವಾಗಾಗಲಿ, 'ಜಾಲಿಯ ಮರದಂತೆ ದುರ್ಜನರು' ಎನ್ನುವಾಗ ಆಗಲಿ 'ನಿಂದಕರಿರಬೇಕು' ಎನ್ನುವಾಗ ಅಪಾರವಾದ ಲೋಕಾನುಭವದ ಸವಿಯು ನಮ್ಮದಾಗುತ್ತದೆ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎನ್ನುವಲ್ಲಿ ಅಂದಿನ ಪ್ರತಿಯೊಬ್ಬನು ದುಡಿಯುವುದು 'ಬಟ್ಟೆ – ಹೊಟ್ಟೆ' ಗಾಗಿಯೇ ಎಂದು ಮೇಲು – ಕೀಳು ಎಂಬುದನ್ನು ದುಡಿಮೆಯಲ್ಲಿ ಹೊಗಲಾಡಿಸಿದ್ದಾನೆ. ಧರ್ಮವನ್ನು ಕುರಿತು ಪುರಂದದಾಸರು ಮಾಡಿರುವ ವ್ಯಾಖ್ಯಾನ ಸಾರ್ವತ್ರಿಕವಾದದ್ದು.

"ಧರ್ಮವೇ ಜಯವೆಂಬ ದಿವ್ಯಮಂತ್ರ

ಮರ್ಮವನರಿತು ಮಾಡಲಿ ಬೇಕುತಂತ್ರ"

ಎಂದು ಪಠಿಸುತ್ತಾ, 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆವೊಂದಿರಲಿ' ಈ ಕೀರ್ತನೆಯು ಧರ್ಮವನ್ನು ನಾನಾ ರೀತಿಯಲ್ಲಿ ಹೆಗ್ಗುರುತೆಂದೂ ದುರ್ಜನರನ್ನು ಪರಮ ಪ್ರೇಮದಿಂದ ಪರಿವರ್ತಿಸಬೇಕೆಂಬುದನ್ನು ವಿಶದಿಪಡಿಸುತ್ತದೆ. ಜೊತೆಗೆ ಮನುಷ್ಯ ತನ್ನನ್ನು ತಾನು ಹೆಜ್ಜೆ ಹೆಜ್ಜೆಗೂ ಪರೀಕ್ಷಿಸಿಕೊಳ್ಳಬೇಕು. ಅಂದಾಗಲೇ ಮನಷ್ಯನ ಜೀವನ ಉದ್ಧಾರವೆನ್ನುತ್ತಾರೆ. ಹೀಗೆ ಪುರಂದರದಾಸರು ಸಮಾಜವನ್ನು ಚಿಕಿತ್ಸಕ, ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರು. "ಅವರ ಇಂತಹ ಸಿದ್ಧಿಗೆ ಕಾರಣ, ಪುರಂದರದಾಸರು ಜನಸಾಮಾನ್ಯರ ಭಾಷೆಯನ್ನು ಬಳಸಿದರು ; ಗಾಯನ, ನರ್ತನೆಗಳ ಮೋಹಕ ಮಾಧ್ಯಮಗಳಾಗಿ ರೂಢಿಸಿದರು. ಉಪನಿಷತ್ತಿನ ಗಹನ ತತ್ವಗಳನ್ನು ಕನ್ನಡಿಸಿದ್ದು ಮಾತ್ರವಲ್ಲ ಆ ತತ್ವಗಳನ್ನು ಸ್ವೀಕರಿಸಬಲ್ಲ ಒಂದು ಸಾಮಾಜಿಕ ಸ್ಥಿತಿಯನ್ನು ಸಿದ್ಧಿ ಮಾಡುವುದಕ್ಕಾಗಿ ಜನತೆಯ ಮೌಢ್ಯ, ಕುಂದು, ಕೊರತೆ, ಲೋಪ–ದೋಷಗಳನ್ನು ಕಟೋಕ್ತಿಯಿಂದ ಖಂಡಿಸಿ ತಿಳಿಹೇಳಿ ಅಸಮಾನ್ಯ ನೈತಿಕ ಧೈರ್ಯವನ್ನು ಸಾಮಾಜಿಕ ಪ್ರಜ್ಞೆಯನ್ನು ವ್ಯಕ್ತಪಡಿಸಿದರು". ಎಂದು ಎಚ್. ಎಸ್. ವೆಂಕಟೇಶಮೂರ್ತಿಯವರು ಹೇಳಿರುವುದು ಪುರಂದರದಾಸರ ವ್ಯಕ್ತಿತ್ವದ ವಿಶಾಲತೆಯನ್ನು ತಿಳಿಸುತ್ತದೆ.

ಕನಕದಾಸರು :

ದಾಸಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದು ಪರಿಗಣಿತವಾಗಿರುವ ಕನಕದಾಸರು ಕನ್ನಡದ ಶ್ರೇಷ್ಠ ಸಂತಕವಿ. ಅನುಭಾವಿ, ಕೀರ್ತನಕಾರರೂ ಮತ್ತು ಕವಿಗಳೂ ಆಗಿದ್ದಾರೆ. ಇವರು ಧಾರವಾಡ ಜಿಲ್ಲೆಯ ಬಾಡ ಎಂಬ ಗ್ರಾಮದಲ್ಲಿ ಬೀರಪ್ಪ ಬಚ್ಚಮ್ಮ ಎಂಬ ದಂಪತಿಗಳ ಉದರದಲ್ಲಿ ಜನ್ಮತಾಳಿದರು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಅಧಿಕಾರಿಯಾಗಿದ್ದರಂತೆ. ಇವರ ಪೂರ್ವದ ಹೆಸರು **ತಿಮ್ಮಪ್ಪ ನಾಯಕ** ಬಾಡ ಗ್ರಾಮದಲ್ಲಿದ್ದ ಆದಿಕೇಶವಮೂರ್ತಿಯನ್ನು ತಂದು ಕಾಗಿನಲೆಯಲ್ಲಿ ಪ್ರತಿಷ್ಠಾನ ಮಾಡಿ ದೇವಾಲಯವನ್ನು ಕಟ್ಟಿಸಿದರಂತೆ. ಯಾವುದೋ ಒಂದು ಸಂದರ್ಭದಲ್ಲಿ ಜೀವನ ನಿರಸನ ಉಂಟಾಗಿ ವ್ಯಾಸರಾಯರಿಂದ ದೀಕ್ಷೆಪಡೆದು ಕನಕದಾಸರಾದರು. ಇವರು ಪುರಂದರದಾಸರ ಸಮಕಾಲೀನರಾಗಿ ಅವರಿಗೆ ಸಮತೂಕದವರೂ ಸ್ವತಂತ್ರ ಕ್ರಾಂತಿಯುಳ್ಳವರೂ, ಸಮಾಜಸುಧಾರಕರೂ, ಕ್ರಾಂತಿಕಾರಿ, ವೈಚಾರಿಕ ಮನೋಧರ್ಮದವರಾಗಿಯೂ ಅದೇ ಕಾಲದಲ್ಲಿ ಜೀವಿಸಿದರು. ಇವರು ಕೀರ್ತನೆಗಳನ್ನಲ್ಲದೆ **'ಮೋಹನ ತರಂಗಿಣಿ' 'ಹರಿಭಕ್ತಿಸಾರ' 'ನಳಚರಿತ್ರೆ' 'ರಾಮಧಾನ್ಯ ಚರಿತ್ರೆ'** ಮುಂತಾದ ಕಾವ್ಯಗಳನ್ನು ಬರೆದರಲ್ಲದೆ, ಅಲ್ಲಮನ ಬೆಡಗಿನ ವಚನಗಳಂತೆ ಮುಡಿಗೆಗಳನ್ನು ಬರೆದು ದಾಸ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. **'ಬಾಡಾದಾದಿ ಕೇಶವ' 'ಕಾಗಿನಲೆ ಆದಿಕೇಶವ'** ಎಂಬುವು ಇವರ ಅಂಕಿತಗಳಾಗಿವೆ. ಕನಕದಾಸರು ಕೀರ್ತನೆ ಮತ್ತು ಕಾವ್ಯಗಳಲ್ಲಿ ಬಂಡಾಯದ ದನಿ, ಸಾಮಾಜಿಕ ಕಳಕಳಿ, ವಿಡಂಬನಾ ಚಾತುರ್ಯ ಇದೆ. ಇವರ ವ್ಯಕ್ತಿತ್ವವನ್ನು ಗುರುತಿಸಲು ಕೆಳವರ್ಗದಿಂದ ಬಂದವರೆಂಬುದು ಮುಖ್ಯಸಂಗತಿಯಾಗಿದೆ.

"ದಾಸಪಂಥದ ಪದ್ಮ ವ್ಯೂಹವನ್ನು ಪ್ರವೇಶಿಸಿದ ಏಕೈಕ ಶೂದ್ರನಾದ ಕನಕದಾಸರು ತನ್ನ ಭಕ್ತಿಯಿಂದ ದಾಸರ ಅನುಗ್ರಹಕ್ಕೆ ಪಾತ್ರನಾಮದೊಂದು ಪವಾಡವೇ ಸರಿ" ಎಂದು ಕೆ. ಜಿ. ನಾಗರಾಜರವರು 'ಮರುಚಿಂತನೆ' ಗ್ರಂಥದಲ್ಲಿ ಕನಕದಾಸನ ಸಾಧನೆ, ಸಿದ್ಧಿಯನ್ನು ತಿಳಿಸಲಾಗಿದೆ. "ದಾಸ ಸಾಹಿತ್ಯದ ಸುವರ್ಣಯುಗದ ಪ್ರವರ್ತಕರಲ್ಲೊಬ್ಬರಾಗಿ, ಯಾವ ಮತವನ್ನು ಬಿಡದೆ, ಯಾವ ಮತಕ್ಕೂ ಅಂಟಿಕೊಳ್ಳದೆ, ಸಕಲ ತತ್ವಗಳನ್ನು ಮೀರಿ, ನಿರ್ದಿಗಂತವಾಗಿ ಬೆಳೆದು, ವಿಶ್ವಮಾನವರಾಗಿ ವಿಜೃಂಭಿಸಿದ ಯೋಗ ಪುರುಷರವರು" ಎಂದು ದೇ. ಜ. ಗೌಡರವರು 'ಜನಪ್ರಿಯ ಕನಕಸಂಪುಟ' ದ ಮುನ್ನುಡಿಯಲ್ಲಿ ಅವರವರ ಸ್ವತಂತ್ರ ಮನೋಭಾವವನ್ನು ಶ್ರೇಷ್ಠತೆಯನ್ನು ತಿಳಿಸಿದ್ದಾರೆ.

ಕನಕದಾಸರ ಕೀರ್ತನೆಗಳಲ್ಲಿ ಸಾಹಿತ್ಯಿಕ ಮೌಲ್ಯಗಳು :

ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಾಂಶ ಪ್ರಧಾನವಾಗಿರುವುದನ್ನು ಹಲವು ವಿಮರ್ಶಕರು ಗುರುತಿಸಿದ್ದಾರೆ. ಅವರು ಬಳಸಿರುವ ಪದ ಪ್ರಯೋಗ, ಅಲಂಕಾರಗಳು, ಛಂದಸ್ಸು, ಚಮತ್ಕಾರ, ವರ್ಣನೆಗಳಲ್ಲಿ ಕಾವ್ಯ ಪ್ರಜ್ಞೆಯೇ ಎದ್ದು ಕಾಣುತ್ತದೆ. ಗ್ರಾಮ್ಯ ಭಾಷೆಯ ಹಿಡಿತ, ಭಾವಗೀತಾತ್ಮಕತೆ, ಜಾನಪದಸತ್ವವನ್ನುಳ್ಳ ಅಂಶಗಳನ್ನು ಗುರುತಿಸಬಹುದು.

"ಪುರಂದರದಾಸರ ಕೀರ್ತನೆಗಳ ಸಂಖ್ಯೆಗೆ ಹೋಲಿಸಿದರೆ ಕನಕದಾಸರ ಕೀರ್ತನೆಗಳು ಅತ್ಯಲ್ಪವಾಗಿ ಕಾಣುತ್ತವೆ ; ಆದರೆ ಕನಕದಾಸರ ಕೀರ್ತನೆಗಳ ಸತ್ವವನ್ನು ಗಮನಿಸಿದರೆ ಅವು ಪುರಂದದಾಸರ ಕೀರ್ತನೆಗಳ ಸತ್ವದೊಂದಿಗೆ ಸಮಸ್ಪರ್ಧಿಯಾಗಬಲ್ಲವು.

Scanned with CamScanner

ಹಾಗೆ ನೋಡಿದಾಗ ಪುರಂದರದಾಸರ ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಗುಣ ಒಂದು ಕೈ ಮಿಗಿಲಾಗಿಯೇ ಇರುವಂತೆ ತೋರುತ್ತದೆ. – – – – ಕನಕದಾಸರ ವ್ಯಕ್ತಿತ್ವ ದಾಸ ಪರಂಪರೆಯ ಭಕ್ತಿ ಪ್ರಜ್ಞೆಗೆ ಒಳಗಾದರೂ ಅವರ ಭಕ್ತಿಭಾವ ಕಾವ್ಯ ಪ್ರಜ್ಞೆಗೆ ಭಿತ್ತಿಯಾಗಿ ಪರಿಣಮಿಸಿತು. ಎಂದು ಜಿ.ಎಸ್. ಶಿವರುದ್ರಪ್ಪನವರು 'ಪರಿಶೀಲನ' ಎಂಬ ವಿಮರ್ಶಾ ಗ್ರಂಥದಲ್ಲಿ ಕನಕ – ಪುರಂದರ ಕಾವ್ಯ ಶಕ್ತಿಯನ್ನು ತೌಲನಿಕವಾಗಿ ವಿವೇಚಿಸಿರುವುದು ಗಮನಾರ್ಹವಾಗಿದೆ. ಕನಕದಾಸರ ಕೀರ್ತನೆಗಳಲ್ಲಿ ಸಾಹಿತ್ಯದ ಉತ್ತಮ ಲಕ್ಷಣಗಳು ಶೈಲಿಯ ವೈಲಕ್ಷಣಗಳು ಮೈಗೂಡಿವೆ. ಅವರ ಕೀರ್ತನೆಗಳನ್ನು ವಿಶ್ಲೇಷಿಸಿದಾಗ ಸಾಹಿತ್ಯದ ಸೊಬಗು – ಸೊಗಡು ಎದ್ದು ಕಾಣುವುದನ್ನು ನೋಡಬಹುದಾಗಿದೆ.

ದ್ವೈತಭಾವದ ಹರಿನಾಮ ಸ್ಮರಣೆಯಿಂದ ಪ್ರಾರಂಭವಾದ ಕನಕದಾಸರ ಸಾಧನೆ ಭಕ್ತಿ, ಆರ್ತತೆ ಆತ್ಮಶೋಧನೆ, ಛಲ ಆತ್ಮೀಯತೆ, ಆತ್ಮಸಮರ್ಪಣೆ, ನೀತಿಭೋಧನೆಗಳ, ಮೂಲಕ ಅದ್ವೈತ ಸಿದ್ಧಿಯ ಪರಮಾಧಿ ನೆಲೆಯನ್ನು ಮುಟ್ಟುತ್ತದೆ. ಶ್ರೀ ಹರಿಯನು ಸಾಕ್ಷಾತ್ಕರಿಸಿಕೊಳ್ಳುವ ಅವನನ್ನು ಎಲ್ಲಡೆಯಲ್ಲೂ ಕಾಣುವ, ಅವನ ಸಂಗಸುಖವನ್ನು ಅನುಭಿವಸುವ ಕಾತರತೆ ಉದ್ವಿಗ್ನತೆ ಮತ್ತು ತುಡಿತಗಳು ಕ್ಷಣ ಕ್ಷಣಕ್ಕೂ ಕಾವೇರುತ್ತವೆ.

"ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"

ಎಂದು ಆತಂಕ, ತಳಮಳಗೊಳ್ಳುವುದನ್ನು ಮನಗಾಣುತ್ತೇವೆ. ಬೆಟ್ಟ, ಕಾಡು – ನದಿಗಳಂತಹ ಏಕಾಂತ ಸ್ಥಿತಿಯ ಪ್ರಾಕೃತಿಕ ವಸ್ತುಗಳ ಪ್ರಸ್ತಾಪವಿದೆ. ಇಲ್ಲಿ ವೃಕ್ಷಕ್ಕೆ ನೀರೆರೆದವರು ; ಪಕ್ಷಿಗಳಿಗೆ ಅನ್ನವಿತ್ತವರ ; ಕಪ್ಪೆಗಳಿಗೆ ಆಹಾರ ತಂದಿತ್ತವರು ಯಾರು? ಎಂಬ ಬೆರಗು, ವಿಸ್ಮಯ ಮೂಲದ ಪ್ರಶ್ನೆಯ ಮೂಲಕ ದಾಸರಿಗೆ ಉತ್ತರವೂ ಸಿಕ್ಕುತ್ತದೆ. 'ಹುಟ್ಟಿಸಿದ ದೇವ ತಾ ಹೊಣೆಗಾರ' ಇಲ್ಲಿಯ ದೃಷ್ಟಾಂತಗಳ ಸೊಬಗೇ ಅಪೂರ್ವವಾಗಿದೆ. ಭಾವದ ಇಂಗಿತ ಭಾಷೆಯಲ್ಲಿ ಸಾಕಾರಗೊಂಡ ಬಗೆಯಲ್ಲಿ ಕನಕದಾಸರ ಕಲ್ಪಕ ಶಕ್ತಿ ಅಗಾಧ ಕುಸರಿ ಕೆಲಸ ಮಾಡಿದೆ ಹಾಗೂ ದಿವ್ಯ ಸೌಂದರ್ಯವನ್ನು ದರ್ಶಿಸಿದೆ.

'ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ'
'ದಾನ ಧರ್ಮವ ಮಾಡಿ ಸುಖಿಯಾಗು ಮನವೆ'
'ತನು ನಿನ್ನದು ಜೀವ ನಿನ್ನದು'

ಎಂಬ ಕೀರ್ತನೆಗಳಲ್ಲಿ ಮನಸ್ಸಿನ ಹೊಯ್ದಾಟಗಳನ್ನು ಸೂಚಿಸುತ್ತವೆ. ಆತ್ಮ ಶೋಧನೆ ಪ್ರತಿಯೊಬ್ಬ ಸಾಧಕನು ಕೈಗೊಳ್ಳಬೇಕಾದ ಸಾಧನ. ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳದಿರುವುದೇ ಅವನ ಆತ್ಮ ಶೋಧನೆಗೆ ನಿದರ್ಶನ ರಾಷ್ಟ್ರಪಿತ, ಮಹಾನ್ ವ್ಯಕ್ತಿತ್ವ ಹೊಂದಿದ ಮಹಾತ್ಮ ಗಾಂಧೀಜಿಯವರು ಕೂಡ ಈ ಆತ್ಮ ಶೋಧನೆಯಿಂದ ಭಾರತದ ಉದ್ದಗಲ ತಮ್ಮ ವಕ್ತಿತ್ವದ ಛಾಯೆಯನ್ನು ಪ್ರಸರಿಸಿದ್ದು ಎನ್ನುವುದು ಸತ್ಯ.

"ಎಳ್ಳು ಕಾಳಿನಷ್ಟು ಭಕುತಿ ಏನ್ನೊಳಗಿಲ್ಲ'
'ಗಂಧ ಕಸ್ತೂರಿ ಲೇಪನದ ಪರಿಮಳ'
'ಮಾಯಾ ಪಾಶದೊಳಗೆ ಸಿಲುಕಿಸುವಂತ ಪಂಚೇಂದ್ರಿಯಗಳು'

ಮುಂತಾದ ಸರ್ವಾರ್ಪಣ ದೃಷ್ಟಿಯ ಈ ಕೀರ್ತನೆಗಳಲ್ಲಿ ಭಾವನಿರ್ಭರತೆಯೇ ಮುಖ್ಯಾಂಶ ಶಬ್ದ ವೈಚಿತ್ರ್ಯ ರೂಪಕಗಳ ಸಾದೃಶ್ಯಗಳು ಉತ್ಸಾಹಶೀಲವಾಗಿವೆ.

'ಬೆಳ್ಳಕ್ಕಿಯ ಡಂಭತನ'
'ಗುಂಡು ಮೂಳುಕನ ಹಕ್ಕಿಯ ಸ್ನಾನ'
'ಮಂಡೂಕನ ಧ್ಯಾನ'
'ಗಾಣದೆತ್ತಿನ ಪ್ರದಕ್ಷಣೆ'
'ಕಳ್ಳರಿಗೆ ಕಳ್ಳನಂತೆ' ಇಲ್ಲಿ ಉಪಮೆಗೆ ಸಮಾದಾನ ಧರ್ಮ ಒದಗಿಸಿದಂತಿದೆ.

ಭಗವಂತನಿಗಾಗಿ ಅನುದಿನ ಅಂಗಲಾಚಿದರೂ ಅವನು ದರ್ಶನವೀಯದಿದ್ದಾಗ ಭಕ್ತನಲ್ಲಿ ಸಹಜವಾಗಿಯೇ ಛಲ ತಲೆಯೆತ್ತುತ್ತದೆ ಅವನ ಮೊರೆ ಪ್ರತಿಭಟನೆಯ ರೂಪ ತಾಳುತ್ತದೆ.

'ಆ ವನಸಿರಿಯಲ್ಲಿ ಎನ್ನ ಮರೆತೆ, ದೇವ ಜಾನಕೀರಮಣಪೇಳು'
'ನಿನ್ನಿಂದ ನಾನೇ ಜನಿಸಿ ಬಂದೆನೆ ದೇವ'
'ನಿನ್ನ ಪ್ರೇರಣೆಯಿಂದ ನಡೆದು ನುಡಿದ ಮೇಲೆ'
'ಆರು ಬದುಕಿದರಯ್ಯ ಹರಿನಿನ್ನ ನಂಬಿ'
'ಬಾಗಿಲನು ತೆರೆದು ಸೇವೆಯನುಕೊಡು ಹರಿಯೇ'

Scanned with CamScanner

ಇವುಗಳಲ್ಲಿ ಭಕ್ತಿಯ ಆರ್ತತೆ, ಸಾತ್ವಿಕ ಕ್ರೋಧ, ಭಾವಾತಿಶಯತೆ, ಸ್ವಭಾವಿಕ ಮನೋಧರ್ಮವಿದೆ.

'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಎಂದು ಮೂರ್ತ ಅಮೂರ್ತ ವಿಚಾರಗಳನ್ನು ಮುಖಾಮುಖೀ ಮಾಡಿ ಹೆಜ್ಜೆ ಹೆಜ್ಜೆಗೂ ವಿಸ್ತರಿಸುತ್ತಾ ಹೋಗುವ ಆಶಯ ಮೂಲವಾದ ಜಿಜ್ಞಾಸೆ, ತನ್ನ ವಿಚಾರದ ವಿಲಾಸದಿಂದ ತಾತ್ವಿಕ ಜಿಜ್ಞಾಸೆಯಲ್ಲಿದೆ ಸೌಂದರ್ಯದ ಜಿಜ್ಞಾಸೆಯೂ ಆಗಿ ಕಡೆಗೆ ಈ ಲೋಕದ ಮೂಲಭೂತ ವಿಸ್ಮಯ ಹೊಳಹಿನಲ್ಲಿ ನಿಲುಗಡೆಯನ್ನು ಕಂಡು ಕೊಳ್ಳುವ ರೀತಿ ಅಪೂರ್ವವಾಗಿದೆ. ಈ ಮೇಲಿನ ಕೀರ್ತನೆಗಳಲ್ಲಿ ಭಾವಗೀತೆಯ ಸಾವಯವ ರಚನಾಗುಣ, ತಾರ್ಕಿಕವಾಗಿ ಪರಿಣಾಮಕಾರಿಯಾದ ಶಿಲ್ಪದಿಂದ ಕೂಡಿಸಿದೆ. ಇಲ್ಲಿಯ ನಾಟಕೀಯ ಶೈಲಿಯೂ ಇದರ ಸಹಜತೆಗೆ ಸಾಕ್ಷಿಯಾಗಿದೆ. ಸರ್ವಶಕ್ತನಾದ ಭಗವಂತನು ಎಲ್ಲ ಕಡೆ ಇರುವಾಗ ನನ್ನಲ್ಲಿಯೂ ಇದ್ದಾನೆ ಎಂಬ ಅರಿವುಂಟಾದ ಮೇಲೆ ಆತನನ್ನು ತಂದೆಯಾಗಿ, ಮಿತ್ರನಾಗಿ ಸಕಲವೂ ಆಗಿ ಕಾಣುತ್ತಾರೆ.

'ಏಕೆ ಪವಡಿಸಿದೆ ನೀನಿಲ್ಲಿ ಜಗದೇಕ ವಿಖ್ಯಾತ
ಪಶ್ಚಿಮ ರಂಗನಾಥ'
'ಮುತ್ತು ಬಂದಿದೆ ಕೇರಿಗೆ, ಜನರೇ ಕೇಳಿ'

ಈ ಕೀರ್ತನೆಯೊಳಗಣ ಕಲ್ಪಕತೆ ಮೆಚ್ಚುವಂತದ್ದು ; ಪುರಾಣ ಪ್ರಪಂಚದ ಉತ್ತರ ಮಾಲಿಕೆಯನ್ನೇ ಅನುಸರಿಸಿದರೂ ಕೊನೆಯ ಸಾಲಿನಲ್ಲಿ ವಿಷಾದ ಪೂರ್ಣವಾದ ಮುಕ್ತಾಯ ಅಭೂತಪೂರ್ಣವಾಗಿದೆ. ಕನಕದಾಸರಲ್ಲಿ ದಾಸರಲ್ಲಿ ಕವಿಗಳು ಎನ್ನುವ ಮಾತಿಗೆ ಜೀವಂತ ಸಾಕ್ಷಿಯಾಗಿದೆ.

ಕನಕದಾಸರು ತಮ್ಮ ಸುತ್ತ ಮುತ್ತಣ ಜೀವನದ ಬಗ್ಗೆ ಪ್ರಜ್ಞೆಯುಳ್ಳವರಾಗಿ ಜನಭಾಷೆಯ ಮೂಲಕ ಎಚ್ಚರಗೊಳಿಸಿದ್ದಾರೆ. ಅವರ ಕೀರ್ತನೆಗಳ ಶೈಲಿ ಬಹುಮಟ್ಟಿಗೆ ದೇಶೀಯತೆಯ ಲಕ್ಷಣಗಳನ್ನು ತುಂಬಿಕೊಂಡಿದೆ. ಅವರಲ್ಲಿ ಕೇವಲ ಸುರಕ್ಷಿತ ಸಮಾಜದ ಭಾಷೆಮಾತ್ರವಲ್ಲ ಅವರು ಹುಟ್ಟಿಬೆಳೆದ ಅಸಿಕ್ಷಿತ ಸಮಾಜದ ಭಾಷೆಯೂ ಯಥಾವತ್ತಾಗಿ ಬಂದಿದೆ.

'ಆತನೊಲಿದ ಮೇಲೆ ಯಾತರ ಕುಲವಯ್ಯ'
'ಡಿಂಬದೊಳು ಪ್ರಾಣವಿರಲು'

ಇಂಥ ಅಭಿವ್ಯಕ್ತಿಗಳು ಇದಕ್ಕೆ ನಿದರ್ಶನಗಳು ಸರಳತೆ, ಹೃದ್ಯತೆಗಳೇ ಅವರ ಶೈಲಿಯ ವಿಶಿಷ್ಟತೆಯಿಂದ ಕೂಡಿದೆ. ಎಲ್ಲಿಯೂ ಭಾಷೆ, ಕಠಿಣತೆಯಿಂದ ಕೂಡಿಲ್ಲ. ಎತ್ತಿಕೊಂಡ ವಸ್ತು ಭಾವಗಳಿಗೆ ಉಚಿತವಾಗಿ, ಸರಳವಾದ ಮಾತುಗಳಲ್ಲಿ ವಿಶೇಷದ ಅರ್ಥವನ್ನು ವಿಸ್ತರಿಸುತ್ತಾ ಹೋಗುತ್ತದೆ.

'ಅಹುದಾದರೆ ಹುದೆನ್ನಿ ಅಲ್ಲವಾದರಲ್ಲವೆನ್ನಿ'
'ದೇವರಿಲ್ಲದ ಗುಡಿಯು ಪಾಳು ಬಿದ್ದಂಗಡಿಯು'
'ಕರ್ಮವಿಲ್ಲದ ಗಂಡು ಕರಿಯ ಒನ ಕೆಯತುಂಡು'

ಈ ಮಾತುಗಳಲ್ಲಿರುವ ಲಾಲಿತ್ಯ ಮತ್ತು ಸರಳತೆ ಜನಸಾಮಾನ್ಯರಿಗೂ ತಿಳಿಯುವಂತಾದ್ದಾಗಿದೆ.

'ಹಳ್ಳ ಹರಿದು ಹೋಗುವಾಗ ಗುಳ್ಳೆ ಬಂದು ಒಡಿಯುವಂತೆ ಉಳ್ಳಿ ಪೊರೆಯಂತೆ ನೋಡೊ ಸಂಸಾರದಾಟವು' ಈ ವರ್ಣನೆಗಳಲ್ಲೆಲ್ಲಾ ಪ್ರತಿಮಾ ವೈಭವಗಳಿಂದ ಕನಕದಾಸರ ಶೈಲಿಯ ವಿಶಿಷ್ಟತೆ ನಿಜವಾದ ಕವಿಗಳು ಎನ್ನುವುದನ್ನು ತೋರಿಸುತ್ತದೆ.

ಒಂದು ಶತಮಾನದಲ್ಲಿ ಪ್ರಚಲಿತವಾದ ವಿವಿಧ ಛಂದೋ ರೂಪ ಸಲೀಸಾಗಿ ಬರೆಯುಬಲ್ಲರು. ಕೀರ್ತನೆಗಳ ದಾಟಿಯಲ್ಲಿ ಸಾಂಗತ್ಯದಲ್ಲಿ ಅವರ ಪ್ರಯೋಗ ಗಮನಾರ್ಹವಾಗಿದೆ. ಇಲ್ಲೆಲ್ಲ ಪ್ರಧಾನವಾಗಿ ದೇಶಿಯತೆ ಮೈದಾಳಿ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತದೆ.

ಆದ್ದರಿಂದಲೇ "ಕನಕದಾಸರು ಕವಿ ಸಂತರ ಸಂಗಮ" ರಾಗಿದ್ದಾರೆ. ನಮ್ಮ ಸಾಹಿತ್ಯದಲ್ಲಿ ಅವರು ನಮಗೆ ಕಾವ್ಯವನ್ನು, ಮೌಲ್ಯಗಳನ್ನು, ಸಂದೇಶಗಳನ್ನು ಉಳಿಸಿ ಹೋಗಿದ್ದಾರೆ. ಅವರ ಬೋಧನೆ ಕಾವ್ಯಮಯವಾಗಿವೆ. ಅವರ ಕಾವ್ಯದಲ್ಲಿ ಅದ್ಭುತವಾದ ಭೋಧನೆಯು ಇದೆ. ತಳಮಳಕ್ಕೊಳಗಾಗಿರುವ ಇಂದಿನ ಬದುಕಿನ ಕನಕದಾಸರ ಕೀರ್ತನೆಗಳಲ್ಲಿ ಒಂದು ನೆಮ್ಮದಿ. ಸಮಾಧಾನಗಳು ಬದುಕಿಗೆ ತೋರುತ್ತದೆ. ಅಸ್ತ ವ್ಯಸ್ತವಾಗಿರುವ ನಮ್ಮ ಸಮಾಜ ಜೀವನಕ್ಕೆ ಅವುಗಳ ಒಂದು ಮಾರ್ಗ ಕಾಣಿಸುತ್ತದೆ. ಎಂದು ಡಾ॥ ಹಾ. ಮಾ. ನಾಯಕರವರು ಹೇಳಿರುವದು ಔಚಿತ್ಯಪೂರ್ಣವಾಗಿದೆ.

ಕನಕದಾಸರ ಕೀರ್ತನೆಗಳಲ್ಲಿ ವಿಡಂಬನೆ ಮತ್ತು ಸಾಮಾಜಿಕ ವಿಮರ್ಶೆ :

ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಜನರ ನಡುವಳಿಕೆ ಸಮಾಜದಲ್ಲಿ ಬೇರು ಬಿಟ್ಟ ರೂಢಿಗತವಾದ ಸಂಪ್ರದಾಯಗಳು, ಜಾತಿ – ಮತ ವ್ಯವಸ್ಥೆಗಳು, ಬಡವ – ಬಲ್ಲಿದ, ಮೇಲು – ಕೀಳೆಂಬ ತಾರತಮ್ಯ, ಹಳಸಲು ಮೌಲ್ಯಗಳು, ಬದುಕಿನ ಆಡಂಬರ ಮೊದಲಾದ ವಿಚಾರಗಳನ್ನು ವಿಡಂಬಿಸಿರುವ ರೀತಿ ಅನನ್ಯವಾದುದು. ಹೀಗೆ ಮಾಡುವಾಗ ಇವರು ವಾಸ್ತವತೆಯ ಕಠೋರ

Scanned with CamScanner

ಸತ್ಯವನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸುವ ಪ್ರಮಾಣಿಕ ಪ್ರಯತ್ನ ಮಾಡುತ್ತಾರೆ. "ಕನಕದಾಸರ ಕೀರ್ತನೆಗಳ ಮೂಲಸೆಲೆ ಭಕ್ತಿಯಾದರೂ ದೈವ ಲೀಲಾವರ್ಣನೆ, ಆತ್ಮ ನಿವೇದನೆ, ಮತ್ತು ಸಾಮಾಜಿಕ ವಿಡಂಬನೆಯ ತ್ರಿವೇಣಿ ಸಂಗಮ ಅವರ ಕೀರ್ತನೆಗಳಲ್ಲಿ ಮಡುಗಟ್ಟಿದೆ" ಎಂದು ಪದ್ಮಾಶೇಖರ ರವರು ಕನಕದಾಸ ಕೃತಿಗಳಲ್ಲಿ ವಿಡಂಬನೆ, ಲೇಖನದಲ್ಲಿ ಹೇಳಿರುವುದು ಸುತ್ಯಾರ್ಹವಾಗಿದೆ.

ಶೂದ್ರ ಕನಕದಾಸರನ್ನು ಅಂದಿನ ಸಮಾಜ ಅವರ ಪಾಂಡಿತ್ಯ, ಪ್ರತಿಭೆ, ಅನುಭಾವಗಳ ಪ್ರಭಾವವನ್ನು ಕಂಡೂ ಮುಕ್ತವಾಗಿ ಸ್ವೀಕರಿಸಲು ಮುಂದಾಗಲಿಲ್ಲ ಇದಕ್ಕೆ ಕೊಡುವ ಕಾರಣ ಒಂದೇ ಒಂದು ; ಜಾತಿ, ಆಗ ಕನಕದಾಸರು ಕುಲವನ್ನೇ ಪ್ರಶ್ನಿಸಲು ಮುಂದಾದರು –

'ಕುಲಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ'
'ಕುಲಕುಲ ವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರಾ'

'ಯಾತರದವನೆಂದುನೆರಲಿ' ಈ ಮೂರು ಕೀರ್ತನೆಗಳಲ್ಲಿಯೂ ಜಾತಿ ಎಂದರೇನು ಎಂಬುದರ ಬಗ್ಗೆ ವ್ಯಾಖ್ಯಾನ ಮಾಡಿ ಜನರಿಗೆ ಜಾತಿ ವಿಷಯ ತಿಳಿಸಿದ್ದಾರೆ. ಆದಿಕವಿ ಪಂಪನೂ ಕೂಡ ಕುಲ ಎಂದರೇನು ಎಂಬುದನ್ನು ೧೦ನೇ ಶತಮಾನದಲ್ಲಿಯೇ ವ್ಯಾಖ್ಯಾನ ಮಾಡಿದ್ದಾನೆ –

"ಮಾನವ ಕುಲಂ ತಾನೊಂದೇ ವಲಂ"
"ಕುಲಂಕುಲ ಮಲ್ತು, ಚಲಂಕುಲಂ, ಗುಣಂಕುಲಂ, ಅಭಿಮಾನವೊಂದೆಕುಲಂ, ಅಣ್ಮುಕುಲಂ" ಎಂದಿದ್ದಾನೆ.

ಹೀಗೆ ಕೀರ್ತನೆಗಳು ಉಲ್ಲೇಖವು ನಮ್ಮ ಸಾಮಾಜಿಕ ಮೌಲ್ಯ ವ್ಯವಸ್ಥೆ ಮತ್ತು ಮೌಲ್ಯ ಶ್ರೇಣಿಗಳ ಪ್ರಕಟನೆಯಲ್ಲಿ ನೆರವಾಗುತ್ತದೆ. ಸಾಮಾಜಿಕ ಚಿಂತನೆಯ ಸ್ವರೂಪ ಪ್ರಕಟಗೊಳ್ಳುತ್ತದೆ. ಉತ್ತಮ ಕುಲದವರು ಎನ್ನುವವರೆಲ್ಲ ಕೀಳು ಮಟ್ಟದ ವಸ್ತುಗಳನ್ನು ಬಳಸುತ್ತಾರೆ ಎನ್ನುವುದಕ್ಕೆ ಇಲ್ಲಿ ಮೂರು ದೃಷ್ಟಾಂತಗಳು ಇವೆ. ಕೆಸರಲ್ಲಿ ಹುಟ್ಟಿದ ತಾವರೆ, ಹಸುವಿನ ಹಾಲು, ಕಸ್ತೂರಿ ಸುಗಂಧ, ಇವೆಲ್ಲವೂ ಶೂದ್ರನಿಗಿಂತ ಕೆಳಮಟ್ಟದಲ್ಲವೇ ಒಂದೇ ಅಲ್ಲವೇ ಎಂಬುದನ್ನು ಹೇಳುತ್ತಾರೆ.

ಸಾಧು – ಸನ್ಯಾಸಿ, ದಾಸ – ಜಂಗಮ ಮುಂತಾದ ವೇಷಗಳ ಮೂಲಕ ಜಗತ್ತಿನಲ್ಲಿ ನಡೆಯುತ್ತಿರುವ ಕಪಟ, ವಂಚನೆ, ದುರ್ವ್ಯವಹಾರಗಳಿಗೆ ಲೆಕ್ಕವೇ ಇಲ್ಲ. ತಾವೇ ಕಂಡ ಅಂಥ ದುಷ್ಕೃತ್ಯಗಳನ್ನು ಕನಕದಾಸರು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ.

"ಜಪವ ಮಾಡಿದರೇನು, ತಪವ ಮಾಡಿದರೇನು
ಕಪಟ ಗುಣ ವಿಪರೀತ ಕಲುಷವಿದ್ದವರು"

ಎಂದು ಪ್ರಶ್ನಿಸುತ್ತಾರೆ. "ನೇಮವಿಲ್ಲದ ಹೋಮವೇತಕಯ್ಯ" ಎಂದು ಡಾಂಭಿಕತನವನ್ನು ವೃತ್ತಿಯಲ್ಲಿ ಪ್ರದರ್ಶಿಸುವುದನ್ನು ಖಂಡಿಸುವರು. ಇಡೀ ಮನುಕುಲವನ್ನು ಸಮದೃಷ್ಟಿಯಿಂದ ನೋಡುವ ಕನಕದಾಸರಿಗೆ ಮುಸ್ಲಿಂರಾಗಲಿ, ವೈಷ್ಣವರಾಗಲಿ, ಲಿಂಗಾಯಿತರಾಗಲಿ ಪ್ರಮಾಣಿಕವಾಗಿ ಆ ಮತಗಳ ಅನುಯಾಯಿಗಳ ಡಾಂಭಿಕತನವನ್ನು ಟೀಕೆಗೆ ಒಳಗುಮಾಡುತ್ತಾರೆ. 'ತೀರ್ಥವ ಪಡಿದವರೆಲ್ಲ ತಿರುನಾರಾಯಣನ ನಾಮದಾರಿಗಳೆ' ಎಂದು ಎಲ್ಲಾ ಮತದವರ ಡಂಭತನವು ಅಂದಿನ ಸಮಾಜದಲ್ಲಿ ಕಲುಷಿತಗೊಂಡಿದ್ದವೆಂದು ನಾವು ತಿಳಿಯಬಹುದಾಗಿದೆ. ಇಲ್ಲಿ ಪರಿಸರದಲ್ಲೂ ಕನಕದಾಸರು ಲೋಕ ಜೀವನವನ್ನು ವ್ಯಾಖ್ಯಾನ ಮಾಡುತ್ತಾರೆ.

"ಎಲ್ಲರು ಮಾಡುವುದು ಹೊಟ್ಟೆಗಾಗಿ
ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ"

ಈ ಕೀರ್ತನೆಯ ಮೊದಲ ಚರಣಗಳ ಮೂಲಕ ವಿವರಿತವಾಗುವ ಲೋಕ ಜೀವನದ ನೆಲೆಯಿಂದ ಮತ್ತು ಕೊನೆಯ ಚರಣದಲ್ಲಿ ಸೂಚಿತವಾಗುವ ಮುಕ್ತಿಯ ನೆಲೆಯವರೆಗೆ ಹೋಗಿ, ಲೋಕ ಜೀವನದ ಹಿಡಿತದಿಂದ ಬಿಡಿಸಿಕೊಂಡು ಇನ್ನೊಂದು ಆಧೀನಕ್ಕೆ ಒಳಗಾಗುವುದಾಗಿದೆ ಅಂದರೆ ಲೋಕವನ್ನು ಮೀರುವುದರಿಂದ ಒದಗುವ ದಿಟ್ಟತನ–ಪ್ರತಿಭಟನೆಯ ಕೆಚ್ಚು ಸಂಪ್ರದಾಯ ವಿರೋಧಿ ಧೋರಣೆ, ಆತ್ಮವಿಮರ್ಶೆ ಮತ್ತು ಲೋಕ ವಿಮರ್ಶೆ, ಸಾಮಾನ್ಯ ಜನರಿಗೆ ತಿಳಿಹೇಳುವುದನ್ನು ಭಾಷೆಯ ಮೂಲಕ ಮೈ ಗೂಡಿಸಿ ಕೊಳ್ಳುತಾರೆ. ಅಂದಿನ ಭಕ್ತಿ ಪಂಥದ ಈ ಲಕ್ಷ್ಯಗಳೆಲ್ಲವೂ ಕನಕದಾಸರಲ್ಲಿ ಮೈ ಗೂಡಿಸಿಕೊಳ್ಳುತ್ತಾರೆ. ಕನಕದಾಸರು ಗೊಡ್ಡು ಸಂಪ್ರದಾಯಗಳ ಮಧ್ಯ ಬೆಳೆದ ಆತ್ಯಾಧುನಿಕ ಎನ್ನಬಹುದಾದ ವೈಚಾರಿಕ ಮನೋಧರ್ಮವನ್ನು ಮೈಗೂಡಿಸಿಕೊಂಡಿದ್ದಾರೆ.

'"ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ
ಬಹು ಜನರು ನೆರೆ ತಿಳಿದು ಪೇಳಿ ಮತ್ತಿದನು"

Scanned with CamScanner

ಎಂದು ಇಂಥ ಅನೇಕ ಕಡೆಗಳಲ್ಲಿ ಸಮಾಜದ ಜನರಿಗೆ ನೀತಿ ಭೋಧನೆಯನ್ನು ಮಾಡುವುದು ಗೊತ್ತಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಕ್ರಿಯಾಶೀಲನಾಗಿರಬೇಕು. ಇಲ್ಲವಾದರೆ ಅವನು 'ಕರಿಯ ಒನಕೆಯ ತುಂಡು ಇದ್ದಂತೆ ಕನಕದಾಸರು ನೀತಿಯನ್ನು ಹೇಳುವುದರ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ತೀಡಿ ನಯಗೊಳಿಸಲು ನೀತಿ ಬೋಧನೆಯದಾಟಿಯಲ್ಲಿ ಸಮಾಜದ ಅನಿಷ್ಟಗಳನ್ನು ತೊಡೆದು ಹಾಕಲು ಜನರನ್ನು ಪರಿವರ್ತನೆಗೊಳಿಸಲು ಪ್ರಯತ್ನಿಸಿದ್ದಾರೆ. ಅದರಲ್ಲಿ ಭಾಷೆಯ ಚಡಿ ಏಟುಗಳಲ್ಲಿ ಪರಿವರ್ತನೆಗೊಳಿಸಲು ಮುಂದಾಗಿರುವುದನ್ನು ನೋಡಬಹುದಾಗಿದೆ.

"ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲ್ಲಿ ದಾನ ಧರ್ಮವ ಮಾಡಿರಯ್ಯ"

ಕೀರ್ತನೆಯಲ್ಲಿ ಹಲವು ವಿಧದ ಸದಾಚಾರ, ಸುಸಂಸ್ಕೃತಿಯ ನೇರ ಪ್ರಸ್ತಾಪವಿದೆ. ಒಂದೆಡೆ ಸಂಸಾರದ ನಿಸ್ಸಾರತೆ, ಜೀವನದ ಅನಿತ್ಯತೆ ಹೇಳುವುದರ ಮೂಲಕ ಸಾರ್ಥಕ ಬದುಕಿನ ಆಶಯವನ್ನು ಸೂಚಿಸುತ್ತದೆ. ಸಮಾಜ ಜೀವನದ ದುರ್ಭರತೆ ಇದೆ. ಆರ್ಥಿಕ ಅಸಮಾನತೆಯಿದೆ. ಅವಗುಣದ ಮೂಢಭಕ್ತಿ ಲೋಭಿಯಾದ ಸಿರಿವಂತ, ಡಂಭಾಚಾರಿಯಾದ ಹರಿಭಕ್ತ, ಅಜ್ಞಾನಿಯಾದ ದುರ್ವ್ಯಸನಿ, ದಾನ – ಧರ್ಮ ಮರೆತ ಸ್ವಾರ್ಥ ಇತ್ಯಾದಿಯನ್ನು ಕನಕದಾಸರು ಚಿಕಿತ್ಸಕ ದೃಷ್ಟಿಯಿಂದ ನೋಡಿದ್ದಾರೆ. ಇಲ್ಲಿನ ಸೌಜನ್ಯ ಪೂರ್ಣಮನವರಿಕೆಯ ದಾಟಿಯೂ ಎದ್ದು ಕಾಣುತ್ತದೆ.

"ಡಿಂಬಿನೊಳಗೆ ಪ್ರಾಣವಿರಲು ಕಂಬಸೂತ್ರದ ಗೊಂಬೆಯಂತೆ ಎಂದಿದ್ದರೊಂದು ದಿನ ಸಾವು ತಪ್ಪದು" ಕನಕದಾಸರು ತಮ್ಮ ಕೀರ್ತನೆಯುದ್ದಕ್ಕೂ ನೇತ್ಯಾತ್ಮಕ ಧಾಟಿಯಲ್ಲಿ ಹೆಣ್ಣು, ಹೊನ್ನು, ಮಣ್ಣುಗಳ ಸುತ್ತಲೂ ಅಲಂಕಾರಿಕವಾಗಿ ಸಾಮಾನ್ಯ ವಸ್ತುಗಳ ತಿರಸ್ಕಾರದಿಂದ ಅಲ್ಲ ಗಳೆಯುತ್ತಾರೆ. 'ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ' ಎಂಬುದರಲ್ಲಿಯೂ ಅವರ ಲೋಕಜ್ಞಾನದ ವ್ಯಾಪ್ತಿ ಮತ್ತು ಮನೋಭಾವದ ಪರಿಪಕ್ವತೆ ಎದ್ದು ಕಾಣುತ್ತದೆ.

"ವರಕವಿಗಳ ಮುಂದೆ ನರಕವಿಗಳು ವಿದ್ಯೆ ತೋರಬಾರದು ಈ ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು" ಎಂದು ಸಾಮಾನ್ಯ ನೀತಿ – ನಡುವಳಿಕೆಯ ಹಾಡು. ಅರ್ಥಪೂರ್ಣವಾದ ಪ್ರಾಸ, ಅನುಪ್ರಾಸಗಳು ಮನಸ್ಸಿನ ಮೇಲೆ ತಕ್ಷಣ ಪರಿಣಾಮವನ್ನು ಬೀರುತ್ತದೆ. ಇದು ಪಡೆದುಕೊಂಡಿರುವ ಭಾವಗೀತಾತ್ಮಕತೆ, ಸಂಕ್ಷಿಪ್ತತೆ, ಉಪಮಾನಿಷ್ಠತೆ, ಉಕ್ತಿಸೌಂದರ್ಯ, ಲೋಕಾನುಭವ ಸಹಜ ನಿದರ್ಶನಗಳು ನೇರವಾಗಿ ಮನಮುಟ್ಟುವಂತೆ ಇವೆ.

ಹೀಗೆ ಇವೆಲ್ಲ ಕನಕದಾಸರ ಅಂದಿನ ಸಮಾಜದ ಸಾಂಸ್ಕೃತಿಕ ದಾಖಲೆಗಳಾಗಿ ಮೂಢನಂಬಿಕೆಯ ಪಳೆಯುಳಿಕೆಗಳಾಗಿ ಗೋಚರಿಸುತ್ತದೆ. "ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಕಣ್ತೆರೆದು ನೋಡಿದ ಅವರು ಜಾತಿಮತಗಳ ತಾರತಮ್ಯಗಳನ್ನು, ಧರ್ಮದ ಆಚರಣೆಯ ಹಿನ್ನೆಲೆಯಲ್ಲಿರುವ ಕುಟಿಲ ಕುಹಕಗಳನ್ನು ಆಧ್ಯಾತ್ಮಿಕ ಚಟುವಟಿಕೆಗಳನ್ನು ಶೋಷಣೆಯ ಜಾಣ್ಮೆಯನ್ನು ಕಂಡು ಕೆರಳುತ್ತಾರೆ. ಸಿಡಿದು ನಿಲ್ಲುತ್ತಾರೆ. ಅನೇಕ ಕೀರ್ತನೆಗಳಲ್ಲಿ ಕಂಡುಬರುವ ಅವರ ಕಟುವಾದ ಮಾತುಗಳ ಹಿಂದೆ ಅವರ ವೈಚಾರಿಕ ಮನೋ ಧೈರ್ಯ ಮಿಂಚುತ್ತದೆ. ಸಾಂಪ್ರದಾಯಿಕ ಚೌಕಟ್ಟಿನೊಳಗಿದ್ದು ಅದನ್ನು ಮೀರುವ ಈ ಮನೋಧರ್ಮದ ಹಿಂದೆ ಅಪಾರವಾದ ಮಾನವೀಯ ಅನುಕಂಪ ಸಾಮಾಜಿಕ ಕಳಕಳಿ, ಸಾಮಾಜಿಕ ಪ್ರಜ್ಞೆ, ಮಾನವೀಯ ಮಿಡಿತಗಳು, ಕಂಡು ಬರುತ್ತವೆ. ಎಂದು ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರು "ಭಾರತೀಯ ಭಕ್ತಿಪಂಥ ಮತ್ತು ಕನಕದಾಸರು" ಲೇಖನದಲ್ಲಿ ಕನಕದಾಸರ ಆಧುನಿಕ ಮನೋಭಾವವು ಪ್ರಕಟಗೊಂಡಿರುವುದರ ಬಗ್ಗೆ ಸೂತ್ರಪ್ರಾಯವಾಗಿ ಈ ಮಾತುಗಳನ್ನು ಹೇಳಿರುವಂತೆ ಕಂಡುಬರುತ್ತದೆ. ಕನಕನ ಕಾವ್ಯಗಳಲ್ಲಿ **'ಮೋಹನತರಂಗಿಣಿ'** ಇದಕ್ಕೆ **'ಕೃಷ್ಣಚರಿತೆ'** ಎಂದು ಮತ್ತೊಂದು ಹೆಸರು ಇದೆ. ಇಲ್ಲಿ ಭಕ್ತಿ ಗುರಿಯಾದರೂ, ಕಾವ್ಯವು ರಸವತ್ತಾಗಿದೆ.

ಹಾಗೆಯೇ 'ನಳಚರಿತ್ರೆ' ಮೂಲತಃ ಅತ್ಯಂತ ರಮ್ಯವಾದ ಒಂದು ಕಥನ ಕಾವ್ಯ ಮಹಾಭಾರತದಿಂದ ಎತ್ತಿಕೊಂಡಿರುವ ಕಥಾವಸ್ತು ಇಲ್ಲಿ ಇದ್ದು, ಭಾಮಿನೀ ಷಟ್ಪದಿಯಲ್ಲಿದೆ. 'ಹರಿಹರಭಕ್ತಿಸಾಗರ'ವು ಎಷ್ಟು ಸರಳವೋ ಅಷ್ಟೇ ಹೃದಯಂಗಮವಾಗಿದೆ. 'ರಾಮಧಾನ್ಯ ಚರಿತ್ರೆ' ಚಮತ್ಕಾರಯುಕ್ತವಾದ ಒಂದು ಖಂಡ ಕಾವ್ಯ ಇದರಲ್ಲಿ ರಾಗಿಯ ಹಿರಿಮೆಯನ್ನು ತಿಳಿಯಬಹುದಾಗಿದೆ. ಉತ್ತಮ ಜಾತಿಯವರೆನಿಸಿಕೊಂಡವರು. ಶ್ರೀಮಂತರೆನಿಸಿಕೊಂಡವರೂ ಅಂತಸ್ಸತ್ತ್ವವಿಲ್ಲದರಾಗಿದ್ದು ಕೇವಲ ಅಹಂಕಾರಿಗಳಾಗಿ ಬಹಿರಾಡಂಬರದಿಂದ ಬಾಳತಕ್ಕವರು ದೈವಕ್ಕೆ ದೂರಾದವರು–ಎಂದು ಕವಿ ಸೂಚಿಸುತ್ತಿರುವಂತೆ ಭಾಸವಾಗುತ್ತದೆ. ಕವಿ ಕನಕನ ಹಾಡುಗಳಲ್ಲಿ ಸಾಕಷ್ಟು ವ್ಯಂಗ್ಯ ಉಕ್ತಿ ಚಾತುರ್ಯಗಳನ್ನು ನಾವು ಕಾಣುತ್ತೇವೆ. 'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳ ಲೇಸು, ಎಂದು ಸಮಾಜಕ್ಕೆ ಕರೆನೀಡುತ್ತಾರೆ.

ಕನಕನು ತಮ್ಮ ಜೀವಿತಾವಧಿಯಲ್ಲಿ ಅನೇಕ ಪವಾಡಗಳನ್ನು ಮಾಡಿರುವದು ತಿಳಿದುಬರುತ್ತದೆ. ಹೀಗಾಗಿ ಈತನನ್ನು ದಾಸಪಂಥದವರು **'ಯಮಧರ್ಮನ ಅವತಾರ'** ಎಂದು ಕರೆದು ಗೌರವಿಸುತ್ತಾರೆಂದು ತಿಳಿದುಬರುತ್ತದೆ.

ವಿಜಯದಾಸರು (ಕ್ರಿ. ಶ. ೧೬೮೨ – ೧೭೫೫) :

ಸಂಚಿ ಹೊನ್ನಮ್ಮ :

'ಸಂಚಿ' ಎಂದರೆ ಚೀಲ. ಹೊನ್ನಮ್ಮ ಎಲೆಯಡಿಕೆಯ ಚೀಲವನ್ನು ಹಿಡಿದು ಅರಮನೆಯಲ್ಲಿ ರಾಜ - ರಾಣಿಯರ ಸಮೀಪವರ್ತಿಯಾಗಿ ಕೆಲಸ ನಿರ್ವಹಿಸುತ್ತಿದ್ದವಳು. ಅರಮನೆಯ ಊಳಿಗದವಳಾದ ಈಕೆ ಸಿಂಗರಾರ್ಯನಿಂದ ವಿದ್ಯಾರ್ಜನೆಗೈದು **'ಹದಿಬದೆಯಧರ್ಮ'** (ಪತಿವ್ರತೆಯರ ಧರ್ಮಕರ್ತವ್ಯ) ಎಂಬ ನೀತಿಕಾವ್ಯ ರಚಿಸಿದಳು. ಇದು ಗೃಹಿಣಿಯರಿಗೆ ಕೈಪಿಡಿಯಾಗಿದೆ. ಗಂಡನೊಡನೆ, ಗರತಿಯಾಗಿ, ಸುಗಮವಾಗಿ ಸಂಸಾರ ಮಾಡುವ ಹೆಣ್ಣಿಗೆ ಹೇಳಿದ ಬುದ್ಧಿವಾದದಂತಿದೆ ಈ ಕಾವ್ಯ.

ಹೊನ್ನಮ್ಮಳು ಯಳಂದೂರಿನಲ್ಲಿ ಜನಿಸಿ ಕ್ರಿ. ಶ. ೧೬೮೦ ರ ಸರಿಸುಮಾರಿನಲ್ಲಿದ್ದ ಪ್ರಸಿದ್ಧ ಕವಯಿತ್ರಿ. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿದ್ದವಳಾಗಿದ್ದಾಳೆ. ಈಕೆಯ ಕೃತಿಯು ಸಾಂಗತ್ಯ ರೂಪದಲ್ಲಿದೆ. ಪರಂಪರಾಗತವಾಗಿ ಬಂದ ಪತಿವ್ರತಾಧರ್ಮವನ್ನು ಸುಂದರವಾಗಿ ನಿರೂಪಿಸಿದ್ದಾಳೆ. ಹೆಣ್ಣಿನ ಸ್ಥಾನ ಮಾನಗಳ ಬಗೆಗೆ ತುಂಬಾ ಶಕ್ತಿಯುತವಾಗಿ ಚಿತ್ರಿಸಿದ್ದಾಳೆ. ಧರ್ಮಶಾಸ್ತ್ರದಲ್ಲಿನ ಸಂಗತಿಗಳನ್ನೆಲ್ಲ ಸಂಗ್ರಹಿಸಿ ಹೆಣ್ಣಿನ ಬಗೆಗೆ ನಿಕೃಷ್ಟ ಭಾವವನ್ನು ತೋರಿರುವದನ್ನು ಕುರಿತು ಅವಳು ಹೇಳುವ ರೀತಿ ;

"ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು

ಕಣ್ಣು ಕಾಣದ ಗಾವಿಲರು"ಎಂದು ಹೆಣ್ಣಿನ ಶ್ರೇಷ್ಠತೆಯನ್ನು ಕುರಿತು ಹಿರಿಮೆಯ ಹೆಮ್ಮೆಯನ್ನು ವ್ಯಕ್ತಪಡಿಸುತ್ತಾಳೆ.

Scanned with CamScanner

'ಹದಿಬದೆಯ ಧರ್ಮ' ಎಂಬ ವಿಷಯವೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸದು ಮತ್ತು ಅಚ್ಚರಿಯಾಗಿದೆ. "ಪದಿನೆಂಟು ಬಣ್ಣನೆಯೊಂದು ಬವಣೆಗೊಂಡು ಪದಗೆದ್ದು ಬಯಲು ಬಣ್ಣಿಸದೆ" ಎಂದು ಕಾವ್ಯ ರಚನೆ ತತ್ವವನ್ನು ಪ್ರತಿಪಾದಿಸುವ ಧೀರೋದಾತ್ತೆಯೂ ಹೌದು. ಈ ಸಾಂಗತ್ಯ ಕೃತಿಯಲ್ಲಿ ಕಥಾನಕವೆಂಬುದಿಲ್ಲ. ರಾಮಾಯಣ, ಮಹಾಭಾರತ, ಮನುಧರ್ಮಶಾಸ್ತ್ರದಲ್ಲಿ ಹೇಳಿದ ಸತಿಧರ್ಮವನ್ನು ಹೇಳುವುದೇ ಇದರ ಉದ್ದೇಶವಾಗಿದೆ. "ಬಲ್ಲರಿಂದಾನು ಕೇಳಿದುದಕೆ ಪೆರ್ಚುಕುಂದಿಲ್ಲದಂತೆ ಚ್ಚರುಗೊಡಿ ಎಲ್ಲರು ಮರಿವಂತೆಳವಾತುಗಳಿಂದೆ ಸೊಲ್ಲಿಸುವನು, ಸೊಗಸುವೊಲು' ಎಂದು ವಿನಮ್ರವಾಗಿ ಉಸುರಿದ್ದಾಳೆ. ಇಲ್ಲಿ ಬಂದಿರುವ ಪತಿವ್ರತಾಧರ್ಮ ನಿಯಮಗಳು, ಭಾರತೀಯ ಸ್ತ್ರೀಯ ಸ್ಥಾನಮಾನದ ವರ್ಣನೆಗಳು ಉದಾಹರಣೆ ರೂಪದ ಕಥೆಗಳು ಶ್ರೀ ವೈಷ್ಣವ ತತ್ವಗಳು ಇತ್ಯಾದಿ ಅಂಶಗಳೆಲ್ಲವನ್ನು ಈ ಕೃತಿಯಲ್ಲಿ ಅಡಕಗೊಳಿಸಿದ್ದಾಳೆ.

ಕುಮಾರ ನಾದೊಡೆ ಬಂದ ಗುಣವೇನವರಿಂದೆ
ಕುವರಿಯಾದೊಡೆ ಕುಂದೇನು ?

ಎಂದು ಗೊಡ್ಡು ಪರಂಪರೆ ಸೆಡ್ಡೊಡೆವ ಪ್ರಖರ ಪ್ರತಿಭಟನೆಯಿದೆ. ಸತಿಧರ್ಮದೊಡನೆ ಪತಿ ಧರ್ಮವನ್ನು, ಪತಿಯಾದವನು ಸತಿಯೊಡನೆ ವಿನಯ, ವಿಧೇಯತೆಯ ಹೇಗೆ ವ್ಯವಹರಿಸಬೇಕೆಂದು ತಿಳಿಹೇಳುತ್ತಾಳೆ.

"ಅರಿಯದ ಪೆಣ್ಣ ನಾದರಿಸಿಯಂಜಿಕೆಗಳ
ಪರಿಪುಗೆಯ್ಯದೆ ಬಲ್ಮೆದೋರೆ "
"ಮುಗದೆ ನಾಚಿಕೆಗೊಳೆ – – – –
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು ಭಾವಿಪೊಡೆ"

ಸಮಾಜದಲ್ಲಿರುವ ಪ್ರತಿಯೊಬ್ಬ ಪುರುಷನು ತನ್ನ ಗೃಹಣಿಯ ಬಗ್ಗೆ ಹೇಗೆ ವರ್ತಿಸಬೇಕು ಎಂಬ ಅಂಶವನ್ನು ಕಾಣಬಹುದಾಗಿದೆ.

ಈ ಕೃತಿಯ ಶೈಲಿಯು ಸ್ವಂತ ಸತ್ವದ ಅಚ್ಚಗನ್ನಡ ಮಾದರಿಯಾಗಿದೆ. ಸಹಜ ಪ್ರಾಸವಿದೆ ತಿಳಿಯಾದ ಓಟವಿದೆ. "ಸರಸ ಸಾಹಿತ್ಯದ ಪರದೇವತೆ" ಎಂಬ ಬಿರುದಿಗೆ ಭಾಜನಳಾದಂತೆ ಈ ನೀತಿ ಕಾವ್ಯವನ್ನು ಪ್ರಸಾಧಿಕ ವಾಣಿಯಿಂದ ಬರೆದಿದ್ದಾಳೆ. ಈ ಕೃತಿ ಸಂಸಾರ ಧರ್ಮದ ಕೈಪಿಡಿಯೂ ಆಗಿದ್ದು, ಪತಿವ್ರತಾ ಧರ್ಮದ ಸುಖಮಯ ದಾಂಪತ್ಯದ ಸಿರಿಗನ್ನಡಿಯೂ ಆಗಿದೆ. ಆಸ್ಥಾನದ ರಾಯಭಾರಿಗಳ ವಿದ್ವತ್ ಕವಿಗಳ ಮೆಚ್ಚುಗೆಯನ್ನು ಹಾಗೂ ಜನಸಾಮಾನ್ಯರ ಪ್ರೀತಿ, ವಿಶ್ವಾಸ ಆದರಗಳನ್ನು ಏಕಕಾಲದಲ್ಲಿ ಗಳಿಸಿದ ಹೊನ್ನಮ್ಮಳು ಕನ್ನಡ ಸಾಹಿತ್ಯದ ಸಾರಸತ್ವ ಲೋಕದ ಕವಯತ್ರಿಯರಲ್ಲಿ ಧೃವತಾರೆಯಾಗಿ ರಾರಾಜಿಸುತ್ತಿರುವುದು ಕಂಡುಬರುತ್ತದೆ.

Scanned with CamScanner